بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 13

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**30 ಮಾರ್ಚ್ 2023, 30 ಅಮಾನ್ 1402 ಹಿಜರಿ ಶಮ್ಸಿ,**
**07 ರಮಝಾನ್ 1444 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَمَنْ كَانَ مَرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ؕ يُرِيْدُ اللّٰهُ بِكُمُ الْيُسْرَ وَلَا يُرِيْدُ بِكُمُ الْعُسْرَ ۫ وَلِتُكْمِلُوا الْعِدَّةَ وَلِتُكَبِّرُوا اللّٰهَ عَلٰى مَا هَدٰىكُمْ وَلَعَلَّكُمْ تَشْكُرُوْنَ (البقرة:186)

**(ಆಲ್-ಬಖರ: 186)**

ಅಂದರೆ: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಾಲುಣಿಸಿದ ತಾಯಿಗೆ (ರಝಾಈ ವಾಲಿದ) ಗೌರವ

ಹಝ್ರತ್ ಅಬುತುಫೈಲ್(ರ) ಅವರು ಹೇಳುತ್ತಾರೆ ನಾನು ರಸೂಲುಲ್ಲಾಹ್(ಸ) ಅವರನ್ನು ಜುಅ್‌ರಾನ ಎಂಬ ಸ್ಥಳದಲ್ಲಿ ನೋಡಿದೆ. ಅವರು ಮಾಂಸವನ್ನು ಹಂಚುತ್ತಿದ್ದರು. ಈ ಸಮಯದಲ್ಲಿ ಅವರ ಬಳಿ ಒಬ್ಬ ಮಹಿಳೆ ಬಂದಾಗ ಹುಝೂರ್(ಸ) ಅವರು ಅವರಿಗೆ ತಮ್ಮ ಚಾದರವನ್ನು ಹರಡಿದರು ಮತ್ತು ಆ ಮಹಿಳೆಯು ಅದರ ಮೇಲೆ ಕುಳಿತುಕೊಂಡರು. ಪ್ರವಾದಿ(ಸ) ಅವರು ತುಂಬಾ ಗೌರವಿಸುತ್ತಿರುವ ಈ ಮಹಿಳೆ ಯಾರು ಎಂದು ನಾನು ಜನರನ್ನು ಕೇಳಿದಾಗ ಅವರು ಹುಝೂರ್(ಸ) ಅವರಿಗೆ ಹಾಲಿಣಿಸಿದ ತಾಯಿಯಾಗಿದ್ದಾರೆ ಎಂದು ಜನರು ಹೇಳಿದರು.

(ಅಬು ದಾವುದ್, ಕಿತಾಬ್ ಅಲ್-ಅದಾಬ್, ಅಧ್ಯಾಯ ಫೀ ಬಿರ್‍ರಿಲ್ ವಾಲಿದೈನ್)

### ತಂದೆಯ ಸ್ನೇಹಿತರೊಂದಿಗೆ ದಯೆಯಿಂದ ವರ್ತಿಸಿರಿ

ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಅವರು ಹೇಳಿದರು: ಒಬ್ಬ ವ್ಯಕ್ತಿಯ ಉತ್ತಮ ಗುಣವೆಂದರೆ ತನ್ನ ತಂದೆಯ ಸ್ನೇಹಿತರೊಂದಿಗೆ ಚೆನ್ನಾಗಿ ನಡೆದುಕೊಳ್ಳುವುದು. ಅವರ ತಂದೆ ತೀರಿಕೊಂಡಿದ್ದರೂ ಅಥವಾ ಬೇರೆ ಸ್ಥಳಕ್ಕೆ ತೆರಳಿದ್ದರೂ. **(ಮುಸ್ಲಿಂ ಕಿತಾಬ್ ಅಲ್-ಬಿರ್ ವಸ್ಸಲಾತ್ ವಲ್-ಅದಾಬ್, ಅಧ್ಯಾಯ ಸಲಾತ್ ಅಲ್-ಅಸ್ದಕಾ ಅಲ್-ಅಬ್-ವಲ್-ಉಮ್-ನಹುಹಾ)**

### ತಮ್ಮನ ಮೇಲೆ ಅಣ್ಣನ ಹಕ್ಕು

ಹಝ್ರತ್ ಸಯೀದ್ ಬಿನ್ ಆಸ್(ರ) ರವರು ವಿವರಿಸುತ್ತಾರೆ, ರಸೂಲುಲ್ಲಾಹ್(ಸ) ಅವರು ಹೇಳಿದರು: ಕಿರಿ ಸಹೋದರ ಮೇಲೆ ಹಿರಿಯ ಸಹೋದರನ ಹಕ್ಕು ತನ್ನ ಮಕ್ಕಳ ಮೇಲೆ ತಂದೆಯ ಹಕ್ಕಿನಂತೆಯೇ ಇರುತ್ತದೆ (ಅಂದರೆ, ಹಿರಿಯ ಸಹೋದರ ತನ್ನ ಕಿರಿಯ ಸಹೋದರನಿಗೆ ತಂದೆಯಂತೆ, ಆದ್ದರಿಂದ ಅವರ ಸೌಜನ್ಯ ಮತ್ತು ಗೌರವವೂ ಸಹ ಕಡ್ಡಾಯವಾಗಿದೆ) **(ಮರಾಸೀಲ್ ಅಬೂ ದಾವೂದ್, ಅಧ್ಯಾಯ ಫೀ ಬಿರ್‍ರಿಲ್ ವಾಲಿದೈನ್, ಪುಟ-19) (ಹದೀಖತುಸ್ಸಾಲಿಹೀನ್, ಹದೀಸ್ ಸಂಖ್ಯೆ-396 ರಿಂದ 398 ರವರೆಗೆ, ಲೇಖಕರು ಮಾನ್ಯ ಮಲಿಕ್ ಸೈಫುರ್ ರೆಹಮಾನ್ ಸಾಹಿಬ್)**

**"ಜನರಿಗೆ, ನಮ್ಮ ಪವಿತ್ರ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ವಾಗ್ದಾನ ನೀಡಿರುವಂತಹ, ನೀತಿವಂತನೂ ಸತ್ಯವಂತನೂ ಮತ್ತು ವಾಗ್ದಾನ ಮಾಡಿದವನು (ಮೌಊದ್) ನಾನೇ ಆಗಿರುವುದಕ್ಕೆ ಸರ್ವಶಕ್ತನಾದ ಅಲ್ಲಾಹನು ಸಾಕ್ಷಿಯಾಗಿದ್ದಾನೆ"**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನನ್ನ ಜಮಾಅತ್ತಿನಲ್ಲಿ ಯಾವುದೇ ತೋರಿಕೆ ಇಲ್ಲ. ಅವರು ನನ್ನೊಂದಿಗೆ ಸಂಬಂಧವನ್ನು ಸ್ಥಾಪಿಸುವಲ್ಲಿ ಯಾವುದೇ ತಪ್ಪು ಮಾಡಿಲ್ಲ ಎಂದು ನನಗೆ ಖಚಿತವಾಗಿದೆ, ಸತ್ಯಾಂಶವೇನೆಂದರೆ ಯಾರ ಆಗಮನದಿಂದ ವಿಶ್ವಾಸದ (ಈಮಾನ್‌ನ) ತೀಕ್ಷ್ಣ ಗ್ರಹಿಕೆ ಲಭಿಸುತ್ತದೆ ಎಂದು ಹೇಳಲಾಗಿದೆಯೋ ಅದು ನಾನೇ ಆಗಿರುವೆನು ಮತ್ತು ಸರ್ವಶಕ್ತನಾದ ಅಲ್ಲಾಹನು ಅದಕ್ಕೆ ಸಾಕ್ಷಿಯಾಗಿದ್ದಾನೆ. ನನಗೆ ತಿಳಿದಿದೆ ನಾನು ಪ್ರಾಮಾಣಿಕ, ವಿಶ್ವಾಸಾರ್ಹ ಮತ್ತು ವಾಗ್ದಾನ ಮಾಡಿದವನು, ಇದು ನಮ್ಮ ಯಜಮಾನರಾದ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಅನುಗ್ರಹದಾಯಕ ನಾಲಿಗೆಯಿಂದ ಜನರಿಗೆ ವಾಗ್ದಾನ ಮಾಡಲ್ಪಟ್ಟಿದೆ, ಆದರೆ ನನ್ನೊಂದಿಗೆ ಸಂಬಂಧವನ್ನು ಹೊಂದಿಲ್ಲದವರು ಈ ಅನುಗ್ರಹದಿಂದ ವಂಚಿತರಾಗಿದ್ದಾರೆ. ಫಿರಾಸತ್ (ತೀಕ್ಷ್ಣಗ್ರಹಿಕೆ) ಒಂದು ಪವಾಡದಂತೆ ಇದೆ. ಈ ಪದವು 'ಫ' ಪದದ ಮೇಲೆ 'ಝಬರ್' ಎಂದೂ ಇದೆ ಮತ್ತು 'ಝೇರ್' ಎಂದೂ ಇದೆ. ಝಬರ್ ಎಂದರೆ ಕುದುರೆಯನ್ನು ಏರುವುದು ಎಂದರ್ಥ. ಮೂಮಿನ್ (ಭಯಭಕ್ತಿವುಳ್ಳವನು) ತೀಕ್ಷ್ಣ ಗ್ರಹಿಕೆಯೊಂದಿಗೆ ತನ್ನ ಸ್ವಯಂ ಆತ್ಮದ ಚಾವಟಿಯಿಂದ ಸವಾರಿ ಮಾಡುತ್ತಾನೆ. ಆತನಿಗೆ ಅಲ್ಲಾಹನ ಕಡೆಯಿಂದ ಪ್ರಕಾಶ ಲಭಿಸುತ್ತದೆ. ಅದರ ಮೂಲಕ ಅವನು ದಾರಿ ಕಂಡುಕೊಳ್ಳುತ್ತಾನೆ. ಅದಕ್ಕಾಗಿಯೇ ರಸೂಲುಲ್ಲಾಹ್(ಸ) ಅವರು ಹೇಳಿದರು: **ಇತ್ತಖು ಫರಾಸತಲ್ ಮೂಮಿನಿ ಫಇನ್ನಹೂ ಯನ್‌ಝುರು ಬನೂರಿಲ್ಲಾಹಿ-** ಅಂದರೆ: ವಿಶ್ವಾಸಿಗಳ ತೀಕ್ಷ್ಣ ಗ್ರಹಿಕೆಯಿಂದ ಭಯಪಡಿರಿ, ಏಕೆಂದರೆ ಆತನು ಅಲ್ಲಾಹನ ಪ್ರಕಾಶದಿಂದ ನೋಡುತ್ತಾನೆ. ಆದುದರಿಂದ ಅಲ್ಲಾಹನ ಪ್ರಕಾಶವನ್ನೇ ಗುರುತಿಸಿದ್ದು ನಮ್ಮ ಜಮಾಅತ್‌ನ ಸದಾಚಾರಕ್ಕೆ ದೊಡ್ಡ ಪುರಾವೆಯಾಗಿದೆ. **(ಮಲ್‌ಫೂಝಾತ್, ಸಂಪುಟ-1, ಪುಟ-423, ಮುದ್ರಿತ ಖಾದಿಯಾನ್ 2018)**

**ಸರ್ವಶಕ್ತನಾದ ಅಲ್ಲಾಹನು ಹಲಾಲ್ ಮಾಡಿದ ವಸ್ತುಗಳನ್ನು ಮಾತ್ರ ನಾವು ಹಲಾಲ್ ಎಂದು ಕರೆಯಬಹುದು ಮತ್ತು ಹರಾಮ್ ಮಾಡಿದ ವಸ್ತುಗಳನ್ನು ಹರಾಮ್ ಎಂದು ಕರೆಯಬಹುದು. ಉಳಿದ ಮಧ್ಯಂತರ ವಿಷಯಗಳ ತೀರ್ಪು ಹಲಾಲ್ ಮತ್ತು ಹರಾಮ್‌ಗೆ ಒಳಪಟ್ಟಿರುತ್ತದೆ**

**ಉಳಿದವುಗಳಲ್ಲಿ, ಒಳ್ಳೆಯದು ಹಲಾಲ್ ಮತ್ತು ಬಾಕಿ ಹಲಾಲ್ ಅಲ್ಲ ಇದರಿಂದ ಹಲಾಲ್ ವಸ್ತುಗಳೆಲ್ಲ ತಯ್ಯಿಬ್ ಅಲ್ಲ, ತಯ್ಯಾಬ್ ಇರುವ ವಸ್ತುಗಳು ಮಾತ್ರ ತಿನ್ನಲು ಅನುಮತಿಸಲಾಗಿದೆ, ಉಳಿದವುಗಳನ್ನು ತಿನ್ನಲು ಅನುಮತಿ ಇಲ್ಲ ಎಂದು ತಿಳಿದುಬಂದಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 116 **ಇನ್ನಮಾ ಹರ್‍ರಮ ಅಲೈಕುಮುಲ್ ಮೈತತ ವದ್ದಮ ವಲಹ್ಮಲ್‌ಖಿನ್‌ಝೀರಿ ವಮಾ ಉಹಿಲ್ಲ ಲಿಗೈರಿಲ್ಲಾಹಿ ಬಿಹೀ; ಫಮನಿಝ್‌ತರ್‍ರ ಗೈರ ಬಾಗಿಂವ್ವಲಾ ಆದಿನ್ ಫಇನ್ನಲ್ಲಾಹ ಗಫೂರುರ್‍ರಹೀಮ್.** (ಅನುವಾದ: ಸತ್ತಪ್ರಾಣಿ, ರಕ್ತ, ಹಂದಿಮಾಂಸ ಮತ್ತು ಅಲ್ಲಾಹೇತರ ನಾಮದಲ್ಲಿ ಅರ್ಪಿಸಲ್ಪಟ್ಟದ್ದನ್ನು ಅವನು ನಿಮಗೆ ನಿಷಿದ್ಧಗೊಳಿಸಿದ್ದಾನೆ. ಆದರೆ ಯಾರಾದರೂ ಸ್ವಯಂ ಇಚ್ಛಿಸದೆ, ಮೇರೆ ಮೀರದೆಯೂ ನಿರ್ಬಂಧಿಸಲ್ಪಟ್ಟರೆ, ಆಗ ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ) ಇದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಈ ಆಯತ್ತಿಗೆ ಸಂಬಂಧಿಸಿದಂತೆ ಒಂದು ದೊಡ್ಡ ಪ್ರಶ್ನೆ ಉದ್ಭವಿಸುತ್ತದೆ ಅಂದರೆ ಇದರಲ್ಲಿ ನಾಲ್ಕು ವಿಷಯಗಳನ್ನು ಉಲ್ಲೇಖಿಸಲಾಗಿದೆ. ಈ ನಾಲ್ಕು ವಿಷಯಗಳು ಹರಾಮ್ ಮತ್ತು ಅವುಗಳ ಹೊರತಾಗಿ ಬೇರೇನೂ ಹರಾಮ್ ಇಲ್ಲವೇ?

ಈ ವಿಷಯಗಳು ಹರಾಮ್, ಬೇರೇನೂ ಹರಾಮ್ ಇಲ್ಲ ಎಂದು ಹೇಳಿದವರ ಅಭಿಪ್ರಾಯದಂತೆ, ನನ್ನ ಅಭಿಪ್ರಾಯವು ಅದೇ ಆಗಿದೆ. ಏಕೆಂದರೆ ಅದಕ್ಕಿಂತ ಬೇರೆ ಅರ್ಥವಿಲ್ಲ. ಈ ಅಭಿಪ್ರಾಯವನ್ನು ಹೊಂದಿರುವ ಜನರಲ್ಲಿ ಒಬ್ಬರು ಇಬ್ನ್ ಅಬ್ಬಾಸ್(ರ) ಆಗಿದ್ದಾರೆ. ಅವರ ಪ್ರಕಾರ, ಬುಖಾರಿಯಲ್ಲಿ ಜಾಬಿರ್ ಬಿನ್

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಬದರ್ ಯುದ್ಧದಲ್ಲಿ ಭಾಗವಹಿಸಿದವರಿಗೆ ಇತರರಿಗಿಂತ ಶ್ರೇಷ್ಠತೆ ಇದೆ. (ಹಝ್ರತ್ ಅಲಿ(ರ))

**ರಸೂಲುಲ್ಲಾಹ್[ಸ] ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿಗಳಾದ ಹಝ್ರತ್ ಆಮಿರ್ ಬಿನ್ ರಬೀಅ(ರ), ಹಝ್ರತ್ ಹರ್‍ರಾಮ್ ಬಿನ್ ಮಿಲ್‌ಹಾನ್(ರ), ಹಝ್ರತ್ ಸಅದ್ ಬಿನ್ ಖೌಲ(ರ), ಹಝ್ರತ್ ಅಬುಲ್ ಹೈಶಮ್ ಬಿನ್ ಅತ್ತೈಹಾನ್(ರ), ಹಝ್ರತ್ ಆಸಿಮ್ ಬಿನ್ ಸಾಬಿತ್(ರ), ಹಝ್ರತ್ ಸಹ್ಲ್ ಬಿನ್ ಹುನೈಫ್ ಅನ್ಸಾರಿ(ರ), ಹಝ್ರತ್ ಉಮೈರ್ ಬಿನ್ ಅಬೀ ವಕ್ಕಾಸ್(ರ) ಮತ್ತು ಹಝ್ರುತ್ ಖುತ್ಬ ಬಿನ್ ಆಮಿರ್(ರ) ರವರ ಪವಿತ್ರ ಜೀವನ ಚರಿತ್ರೆಯ ಕೆಲವು ಘಟನೆಗಳ ಪ್ರಸ್ತಾವನೆ**

ಹಝ್ರತ್ ಹರ್‍ರಾಮ್(ರ.ಅ) ಅವರು ತಮ್ಮ ಕೈಯಲ್ಲಿ ಗಾಯಗಳಿಂದ ಹೊರಬರುತ್ತಿದ್ದ ರಕ್ತವನ್ನು ತೆಗೆದುಕೊಂಡು, **"ಅಲ್ಲಾಹು ಅಕ್ಬರ್! ಫುಝ್ತು ವ ರಬ್ಬಿಲ್ ಕಅ್‌ಬ**– ಅಲ್ಲಾಹನೇ ದೊಡ್ಡವನು, ಕಅಬದ ಪ್ರಭುವಿನಾಣೆ ನಾನು ಜಯಶಾಲಿಯಾದೆನು.

ಪ್ರಸ್ತುತ ವಿರೋಧದ ಹಿನ್ನೆಲೆಯಲ್ಲಿ ಪಾಕಿಸ್ಥಾನದ, ಅಲ್‌ಜಝಾಏರ್‌ನ ಹಾಗೂ ಬುರ್ಕಿನಾ ಫಾಸೋವಿನ ಅಹ್ಮದಿಯರಿಗೋಸ್ಕರ ದುಆವಿನ ಕೋರಿಕೆ

ಪಾಕಿಸ್ಥಾನದ ಮುಕರ್‍ರಮ್ ಮುಹಮ್ಮದ್ ರಶೀದ್ ಸಾಹಿಬ್, ಇಬ್ನು ಚೌಧರಿ ಬಶಾರತ್ ಅಹ್ಮದ್ ಸಾಹಿಬ್, ತುರ್ಕಿ ದೇಶದ ಭೂಕಂಪದಲ್ಲಿ ಮೃತರಾದ ಮುಕರ್‍ರಮ ಉಮ್ಮಾನಿ ಬಸಾಮ್ ಅಜ್‌ಲಾನಿ ಸಾಹಿಬ ಮತ್ತು ಅವರ ಪುತ್ರ ಸಬಾಹ್ ಅಬ್ದುಲ್ ಮುಈನ್ ಖತೀಶ್‌ರವರ ಮತ್ತು ಜಮಾಅತಿನ ಮುರಬ್ಬಿ ಮುಕರ್‍ರಮ್ ಮಖ್‌ಸೂದ್ ಅಹ್ಮದ್ ಮುನೀಬ್ ಸಾಹಿಬರ ಸದ್ಗುಣಗಳನ್ನು ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24–02–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ ۔ بِسْمِ اللّٰهِ الرَّحْمٰنِ الرَّحِيمِ
اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔
اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ನಾನು ಹಿಂದೆ ಪ್ರಸ್ತಾಪಿಸಿದ ಬದರಿ ಸಹಾಬರಿಗೆ ಸಂಬಂಧಿಸಿ ಕೆಲವು ವಿಷಯಗಳು ಪ್ರಸ್ತಾಪಿಸಲು ಉಳಿದಿತ್ತು. ಅವುಗಳನ್ನು ವಿವರಿಸುತ್ತಿದ್ದೆನು. ಇಂದಿನ ಖುತ್‌ಬದಲ್ಲಿಯೂ ಅವರಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ವಿವರಿಸುವೆನು. ಇಂದು ನಾನು ನೀಡುವ ವಿವರಣೆಗಳೊಂದಿಗೆ ಬದರಿ ಸಹಾಬರಿಗೆ ಸಂಬಂಧಿಸಿ ವಿವರಿಸಲು ನಾನು ಇಚ್ಛಿಸುತ್ತಿದ್ದ ಮಾಹಿತಿಗಳು ಮುಕ್ತಾಯಗೊಳ್ಳುವುವು.

ಹಝ್ರತ್ ಆಮಿರ್ ಬಿನ್ ರಬೀಅ(ರ)ರ ಬಗ್ಗೆ ಹೀಗೆ ಬರೆಯಲಾಗಿದೆ: ಅವರ ತಂದೆ ರಬೀಅ ಬಿನ್ ಕಅಬ್ ಬಿನ್ ಮಾಲಿಕ್ ರಬೀಅ. ಈ ಸಹಾಬಿ ಕೆಲವು ಹದೀಸುಗಳನ್ನು ವರದಿ ಮಾಡಿದ್ದಾರೆ. ಅಬ್ದುಲ್ಲಾ ಬಿನ್ ಆಮಿರ್ ರಬೀಅ(ರ) ತನ್ನ ತಾಯಿ ಹಝ್ರತ್ ಉಮ್ಮು ಅಬ್ದುಲ್ಲಾ ಲೈಲಾ ಬಿನ್ತ್ ಅಬೂ ಹಸ್ಮ(ರ)ರಿಂದ ವರದಿ ಮಾಡುತ್ತಾರೆ: ನಾವು ಅಬಿಸೀನಿಯಾ ದೇಶದ ಕಡೆಗೆ ಪ್ರಯಾಣ ಹೊರಡಲು ಸಿದ್ಧರಾಗಿದ್ದೆವು. ಆಗ ಆಮಿರ್ ಬಿನ್ ರಬೀಅ ಯಾವುದೋ ಕೆಲಸಕ್ಕೋಸ್ಕರ ಎಲ್ಲಿಗೋ ಹೋಗಿದ್ದರು. ಬಹುದೇವಾರಾಧಕರಾಗಿದ್ದ ಹಝ್ರತ್ ಉಮರ್(ರ) ನಮ್ಮ ಬಳಿಗೆ ಬಂದು ನಮ್ಮೊಂದಿಗೆ ಕೇಳಿದರು: ಏನು ಹೊರಟು ಹೋಗುವಿರೇನು? ನಾನು ಹೇಳಿದೆ: ಹೌದು, ಅಲ್ಲಾಹನಾಣೆ ನಾವು ಅಲ್ಲಾಹನ ಭೂಮಿಯ ಕಡೆಗೆ ಹೋಗುತ್ತಿದ್ದೇವೆ. ಅಲ್ಲಾಹನು ನಮಗೋಸ್ಕರ ಭೂಮಿಯನ್ನು ವಿಶಾಲಗೊಳಿಸುವ ತನಕ ಹೋಗುವೆವು. ನೀವೆಲ್ಲರೂ ನಮಗೆ ಬಹಳ ದುಃಖ ನೀಡಿದಿರಿ. ನಮ್ಮ ಮೇಲೆ ಬಹಳ ದೌರ್ಜನ್ಯ ಮಾಡಿರುವಿರಿ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ನಿಮ್ಮ ಸಂರಕ್ಷಕನಾಗಲಿ.

ಹಝ್ರತ್ ಲೈಲಾ(ರ) ಹೇಳುತ್ತಾರೆ: ಅಂದು ನಾನು ಹಝ್ರತ್ ಉಮರ್(ರ)ರವರ ಧ್ವನಿಯಲ್ಲಿ ಎಂತಹ ಅನುಕಂಪ ಕಂಡೆನೆಂದರೆ ಹಿಂದೆಂದೂ ಅಂತಹ ಅನುಕಂಪ ಕಂಡಿರಲಿಲ್ಲ. ನಾವು ನಮ್ಮ ಊರನ್ನು ಬಿಟ್ಟು ಹೋಗುವುದು ಅವರನ್ನು ದುಃಖಿಸುವಂತೆ ಮಾಡಿತ್ತು. ಹಝ್ರತ್ ಆಮಿರ್(ರ) ಮರಳಿ ಬಂದಾಗ ನಾನು ಅವರೊಂದಿಗೆ ಕೇಳಿದೆ: ನೀವು ಉಮರ್(ರ) ಮತ್ತು ಅವರ ಅನುಕಂಪಭರಿತ ವರ್ತನೆಯನ್ನು ನೋಡಿರುವಿರೋ? ಹಝ್ರತ್ ಆಮಿರ್(ರ) ಉತ್ತರವಾಗಿ ಹೇಳಿದರು: ಉಮರ್(ರ) ಮುಸ್ಲಿಮರಾಗಬೇಕೆಂದು ನೀನು ಆಶಿಸುತ್ತಿರುವಿಯೋ? ಅನಂತರ ಹೀಗೆ ಹೇಳಿದರು: ಖತ್ತಾಬರ ಕತ್ತೆ ಮುಸ್ಲಿಮನಾಗಬಹುದು ಆದರೆ ಆ ವ್ಯಕ್ತಿ ಮುಸ್ಲಿಮನಾಗಲಾರ. ಹಝ್ರತ್ ಲೈಲಾ(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಇಸ್ಲಾಮನ್ನು ವಿರೋಧಿಸುತ್ತಿದ್ದ ಕಾರಣದಿಂದ ಮತ್ತು ಅವರ ಕಠಿಣ ವರ್ತನೆಯ ಕಾರಣದಿಂದ ನಿರಾಶೆಗೊಂಡು ಹಝ್ರತ್ ಆಮಿರ್(ರ) ಹಾಗೆ ಹೇಳಿದ್ದರು.(ಉಸದುಲ್‌ಗಾಬ, ಭಾಗ–3, ಪುಟ–118, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003) (ಫಝಾಎಲುಸ್ಸಹಾಬ ಲಿಇಮಾಮ್ ಅಹ್ಮದ್ ಬಿನ್ ಹಂಬಲ್, ಭಾಗ–1, ಪುಟ–279, ಜಾಮಿಅ ಅಲ್‌ಖುರಾ 1983) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶಾಮ್, ಭಾಗ–1, ಪುಟ–370, ದಾರುಲ್ ಕುತುಬ್ ಅಲ್‌ಅರಬೀಯ ಲೆಬನಾನ್ 1990)

ಹಝ್ರತ್ ಅಬ್ದುಲ್ಲಾ ಬಿನ್ ಅಮೀರ್ ಬಿನ್ ರಬಿಯಾ ಅವರು ತಮ್ಮ ತಂದೆಯಿಂದ ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ರವರು ನಮಗೆ ಬದ್ರ್ ಯುದ್ಧದ ಮೊದಲು ಸರಿಯಾ ಅಬ್ದುಲ್ಲಾ ಬಿನ್ ಜಹ್ಶ್ ಎಂದೂ ಕರೆಯಲ್ಪಡುವ ಸರಿಯಾ ನಖ್ಲಾಗೆ ನಮ್ಮನ್ನು ಕಳುಹಿಸಿದರು ಮತ್ತು ನಮ್ಮೊಂದಿಗೆ ಹಝ್ರತ್ ಅಮ್ರ್ ಬಿನ್ ಸುರಾಖರವರು ಸಹ ಇದ್ದರು ಅವರು ಹಗುರವಾದ ಹೊಟ್ಟೆ ಮತ್ತು ಎತ್ತರದವರಾಗಿದ್ದರು. ದಾರಿಯಲ್ಲಿ ಅವರು ತುಂಬಾ ಹಸಿದಿದ್ದರಿಂದ ಅವರು ಆಯಾಸಗೊಂಡರು ಮತ್ತು ನಮ್ಮೊಂದಿಗೆ ನಡೆಯಲು ಸಾಧ್ಯವಾಗದೆ ಕೆಳಗೆ ಬಿದ್ದರು. ಇದು ಹಸಿವಿನ ಸ್ಥಿತಿಯಾಗಿತ್ತು. ನಾವು ಒಂದು ಕಲ್ಲಿನ ತುಂಡನ್ನು ತೆಗೆದುಕೊಂಡು ಅದನ್ನು ಅವರ ಹೊಟ್ಟೆಯ ಮೇಲೆ ಇರಿಸಿ ಅದನ್ನು ಅವರ ಸೊಂಟಕ್ಕೆ ಬಿಗಿಯಾಗಿ ಕಟ್ಟಿದೆವು. ನಂತರ ಅವರಿಗೆ ನಮ್ಮೊಂದಿಗೆ ನಡೆಯಲು ಸಾಧ್ಯವಾಯಿತು. ನಮಗೆ ಔತಣವನ್ನು ನೀಡಿದ ಅರಬ್ ಗೋತ್ರದವರ ಬಳಿ ನಾವು ತಲುಪಿದೆವು. ಅದರ ನಂತರ ಅವರು ನಡೆದು ಕೊಂಡು ಹೋದರು ಮತ್ತು ಅವರು ಹೇಳಿದರು ಒಬ್ಬ ವ್ಯಕ್ತಿಯ ಕಾಲುಗಳು ಅವನ ಹೊಟ್ಟೆಯನ್ನು ಹೊತ್ತೊಯ್ಯುತ್ತವೆ ಎಂದು ನಾನು ಭಾವಿಸಿದ್ದೆ, ಆದರೆ ಒಬ್ಬ ವ್ಯಕ್ತಿಯ ಹೊಟ್ಟೆಯು ಅವನ ಕಾಲುಗಳನ್ನು ಹೊತ್ತೊಯ್ಯುತ್ತದೆ. (ಅಲ್ಲಾಮಾ ಅಬು ನಯೀಮ್ ಅವರಿಂದ ಮಾರಿಫತಿಸ್ಸಹಾಬ, ಭಾಗ–1, ಪುಟ 2004–2005, ಅಮ್ರ್ ಬಿನ್ ಸುರಕಾ, ದಾರ್ ಅಲ್–ವತನ್ ಲನ್ನರ್) (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–330)

ಹಸಿವು ಮತ್ತು ದೌರ್ಬಲ್ಯದ ಸ್ಥಿತಿ ಇದ್ದಾಗ ಒಬ್ಬ ವ್ಯಕ್ತಿಯು ನಡೆಯಲು ಸಹ ಸಾಧ್ಯವಿಲ್ಲ.

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಒಮ್ಮೆ ಹಝ್ರತ್ ಆಮಿರ್ ಬಿನ್ ರಬೀಅ(ರ) ಮತ್ತು ಹಝ್ರತ್ ಸಹಲ್ ಬಿನ್ ಹುನೈಫ್(ರ)

ಅವರನ್ನು ಬೇಹುಗಾರಿಕೆಗೆ ಕಳುಹಿಸಿದರು ಎಂದು ಹಝ್ರತ್ ಅಬು ಉಮಾಮಾ(ರ) ವರದಿ ಮಾಡುತ್ತಾರೆ. (ಕುಂರಝ್ ಅಲ್-ಅಮಾಲ್, ಭಾಗ-4, ಪುಟ 470, ಹದೀಸ್-11399, ಅಲ್-ರಸಾಲತ್ ಇನ್ಸ್ಟಿಟ್ಯೂಟ್, ಬೈರುತ್, ಲೆಬನಾನ್, 1985)

8 ಹಿಜ್ರಿಯಲ್ಲಿ ಝಾತ್ ಅಲ್-ಸಲಾಸಿಲ್ ಯುದ್ಧದಲ್ಲಿ ಹಝ್ರತ್ ಆಮಿರ್ ಬಿನ್ ರಬೀಅ(ರ) ಸಹ ಭಾಗಿಯಾಗಿದ್ದರು ಮತ್ತು ಒಂದು ಬಾಣವು ಅವರ ತೋಳಿಗೆ ತಗುಲಿದ ಕಾರಣ ಅವರು ಗಾಯಗೊಂಡರು.

(ಸೈರ್ ಅಲ್‌ಲಾಮುನ್ ನಬಲ, ಸೀರತುನ್ನಬಿ, ಭಾಗ-2, ಪುಟ-149, ಘಜ್ವಾ ಝಾತ್ ಅಲ್-ಸಲಾಸಿಲ್, ಅಲ್-ರಸಾಲತ್ ಅಲ್-ಆಲಮೀಯಾ 1985)

ಅಬ್ದುಲ್ಲಾ ಬಿನ್ ಆಮಿರ್ ತನ್ನ ತಂದೆ ಹಝ್ರತ್ ಆಮಿರ್ ಬಿನ್ ರಬೀಅ(ರ) ಅವರಿಂದ ವರದಿ ಮಾಡುತ್ತಾರೆ, ಒಮ್ಮೆ ರಸೂಲುಲ್ಲಾಹ್(ಸ) ಒಂದು ಖಬರ್ ಬಳಿಯಿಂದ ಹಾದುಹೋಗುವಾಗ ಅವರು(ಸ) ಕೇಳಿದರು, "ಇದು ಯಾರ ಸಮಾಧಿ?" ಇದು ಆ ಮಹಿಳೆಯ ಸಮಾಧಿಯಾಗಿದೆ ಎಂದು ಜನರು ಉತ್ತರಿಸಿದರು. ಅದಕ್ಕೆ ಅವರು ಹೇಳಿದರು: ನೀವು ನನಗೆ ಏಕೆ ತಿಳಿಸಲಿಲ್ಲ? ಆ ಸಮಯದಲ್ಲಿ ನೀವು ವಿಶ್ರಾಂತಿ ಪಡೆಯುತ್ತಿದ್ದೀರಿ ಆದ್ದರಿಂದ ನಿಮ್ಮನ್ನು ಎಬ್ಬಿಸುವುದು ಸೂಕ್ತವಿಲ್ಲ ಎಂದು ನಾವು ನಿಮಗೆ ತಿಳಿಸಲಿಲ್ಲ ಎಂದು ಜನರು ಹೇಳಿದರು. ಇದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಹೀಗೆ ಮುಂದೆ ಮಾಡಬೇಡಿ. ನಿಮ್ಮ ಅಂತ್ಯಕ್ರಿಯೆಗೆ ನನ್ನನ್ನು ಸಹ ಕರೆಯಿರಿ.

ನಂತರ ರಸೂಲುಲ್ಲಾಹ್(ಸ) ಅಲ್ಲಿ ಸಾಲುಗಳನ್ನು ರಚಿಸಿ ನಮಾಝೆ ಜನಾಝವನ್ನು ನಿರ್ವಹಿಸಿದರು.(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-24, ಪುಟ-443, ಹದೀಸ್-15673, ಮುಅಸ್ಸಸುರ್ರಿಸಾಲ ಬೈರೂತ್)

ಹಝ್ರತ್ ಅಬ್ದುಲ್ಲಾ ಬಿನ್ ಆಮಿರ್(ರ) ಹೇಳುತ್ತಾರೆ: ನನ್ನ ಪಿತ ಹಝ್ರತ್ ಆಮಿರ್ ಬಿನ್ ರಬೀಅ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮನ್ನು ಯಾವುದಾದರೂ ದಂಡಯಾತ್ರೆಗೆ ಕಳುಹಿಸುವಾಗ ನಮ್ಮ ದಾರಿ ಖರ್ಚಿಗೆ ಖರ್ಜೂರ ತುಂಬಿಸಿದ ಒಂದು ಚೀಲ ಮಾತ್ರ ನೀಡಲಾಗುತ್ತಿತ್ತು. ಸೈನ್ಯದ ದಂಡ ನಾಯಕರು ಸೈನಕರಿಗೆ ಒಂದೊಂದು ಮುಷ್ಠಿ ಖರ್ಜೂರ ಹಂಚುತ್ತಿದ್ದರು. ಆ ಖರ್ಜೂರ ಮುಗಿಯುತ್ತಾ ಬಂದಂತೆ ನಂತರ ಒಬ್ಬನಿಗೆ ಒಂದು ಖರ್ಜೂರ ಪ್ರಕಾರ ಸಿಗುತ್ತಿತ್ತು. ಅಬ್ದುಲ್ಲಾ ಹೇಳುತ್ತಾರೆ: ನಾನು ನನ್ನ ಪಿತನೊಂದಿಗೆ ಕೇಳಿದೆ, ಒಂದು ಖರ್ಜೂರ ಹೇಗೆ ತಾನೆ ಸಾಕಾಗಬಲ್ಲುದು? ಅವರು ಹೇಳಿದರು: ಹಾಗೆ ಹೇಳಬೇಡ. ಆ ಒಂದು ಖರ್ಜೂರ ಸಹ ನಮ್ಮ ಬಳಿ ಇಲ್ಲದೆ ಇರುವಾಗ ನಮಗೆ ಅದರ ಮಹತ್ವ ಮನವರಿಕೆಯಾಗುತ್ತದೆ.

(ಹುಲ್ಯತುಲ್ ಔಲಿಯಾ ವ ತ್ತಬಖಾತುಲ್ ಅಸ್‌ಫಿಯಾ, ಭಾಗ-1, ಪುಟ-179, ದಾರುಲ್ ಫಿಕರ್ ಬೈರೂತ್ ಲೆಬನಾನ್ 1996)

ಹಝ್ರತ್ ಉಮರ್(ರ) ತಮ್ಮ ಖಿಲಾಫತ್ ಕಾಲದಲ್ಲಿ ಖೈಬರ್ ಪ್ರದೇಶದಿಂದ ಯಹೂದಿಯರನ್ನು ಹೊರಗೆ ಹಾಕಿದಾಗ ವಾದಿಖುರಾದ ಭೂಮಿಯನ್ನು ಯಾರಿಗೆಲ್ಲ ಹಂಚಲಾಯಿತೋ ಅಂತಹ ಜನರಲ್ಲಿ ಹಝ್ರತ್ ಆಮಿರ್ ಬಿನ್ ರಬೀಅ ಸಹ ಇದ್ದರು. (ಅಬು ಝೈದ್ ಉಮರ್ ಬಿನ್ ಶಬಾಹ್ ಅವರ ಕಿತಾಬ್ ಅಖ್ಬಾರ್ ಅಲ್-ಮದೀನಾ ಅಲ್-ನಬವಿಯಾಹ್, ಸಂಪುಟ-1, ಪುಟ-181, ಅಮ್ರ್ ಖೈಬರ್, ದಾರ್ ಅಲ್-ಉಲಿಯಾನ್)

ಹಝ್ರತ್ ಉಮರ್(ರ) ಜಾಬಿಯಕ್ಕೆ ಹೋದಾಗ ಹಝ್ರತ್ ಆಮಿರ್(ರ) ಅವರ ಜೊತೆಗಿದ್ದರು. ಒಂದು ವರದಿ ಪ್ರಕಾರ ಹಝ್ರತ್ ಉಮರ್(ರ)ರ ಪತಾಕೆ ಹಝ್ರತ್ ಆಮಿರ್(ರ)ರವರ ಬಳಿ ಇತ್ತು.

(ಅಲ್‌ಅಸಾಬ ಫೀ ತಮೀಝೀಸ್ಸಹಾಬ, ಸಂಪುಟ-3, ಪುಟ-469, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1995) (ಮುಜಮುಲ್ ಬಲದಾನ್, ಸಂಪುಟ-2, ಪುಟ-91, ದಾರ್ ಸಾದಿರ್ ಬೈರೂತ್ ಲೆಬನಾನ್) (ಸೈರ್ ಅಲ್‌ಲಾಮುನ್ನಬಲ, ಸಂಪುಟ-2, ಪುಟ-334, ಆಮಿರ್ ಬಿನ್ ರಬೀಅ, ಅರ್ರಿಸಾಲತುಲ್ ಅಲ್‌ಲಮೀಯ 1984)

ಹಝ್ರತ್ ಆಮಿರ್ ಬಿನ್ ರಬೀಅ(ರ) ನಿಧನ ಹೊಂದಿದ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವರ ಪ್ರಕಾರ ಅವರ ನಿಧನವು ಹಝ್ರತ್ ಉಸ್ಮಾನ್(ರ) ರವರ ಖಿಲಾಫತ್ ಕಾಲಘಟ್ಟದಲ್ಲಿ ಆಯಿತು ಮತ್ತು ಕೆಲವರ ಪ್ರಕಾರ 37 ಹಿಜರಿಯಲ್ಲಾಯಿತು ಎಂದಾಘಿದೆ ಆದರೆ ಅಲ್ಲಾಮ ಇಬ್ನು ಅಸಾಕಿರ್ ಪ್ರಕಾರ ಅವರು ಹಿಜರಿ ವರ್ಷ 32ರಲ್ಲಿ ನಿಧನ ಹೊಂದಿದರೆಂಬ ವರದಿ ಹೆಚ್ಚು ವಿಶ್ವಾಸಾರ್ಹವಾಗಿ ತೋರುತ್ತದೆ. (ತಾರೀಖ್ ಸಮಿಷ್ಕ್ ಅಲ್‌ಕಬೀರ್, ಇಬ್ನೆ ಅಸಾಕಿರ್, ಭಾಗ-27, ಪುಟ-229, ದಾರ್ ಅಹ್ಯಾಉತ್ತುರಾಸುಲ್ ಅರಬೀಯ ಲೆಬನಾನ್ 2001)

ಅವರ ಬಗ್ಗೆ ಹೀಗೆ ಸಹ ವರದಿಯಾಗಿದೆ: ಹಝ್ರತ್ ಉಸ್ಮಾನ್(ರ)ರ ಶಹಾದತ್ ಘಟನೆಯ ನಂತರ ಹಝ್ರತ್ ಆಮಿರ್(ರ) ತಾನು ಮೃತರಾಗುವ ತನಕ ಮನೆಯೊಳಗೆಯೇ ಇರುತ್ತಿದ್ದರು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಸಂಪುಟ-3, ಪುಟ-296, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಅಬ್ದುಲ್ಲಾ ಬಿನ್ ಆಮಿರ್(ರ) ತನ್ನ ಪಿತನಿಂದ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜೀವಿಸಿರುವ ಕಾಲದಲ್ಲಿ ಒಬ್ಬ ವ್ಯಕ್ತಿ ಒಂದು ಜೋಡಿ ಪಾದರಕ್ಷೆಗಳನ್ನು ಮಹರ್ ಆಗಿ ನೀಡಿ ಬನೂ ಖಝಾರ ಗೋತ್ರದ ಒಬ್ಬ ಮಹಿಳೆಯನ್ನು ನಿಕಾಹ್ ಮಾಡಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ನಿಕಾಹ್ ಧರ್ಮಬದ್ಧವಾಗಿದೆ ಎಂದು ವಿಧಿಸಿದರು.

(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-24, ಪುಟ-445, ವರದಿ ಸಂಖ್ಯೆ-15676, ಮುಅಸ್ಸಸುರ್ರಿಸಾಲ ಬೈರೂತ್)

ಹಝ್ರತ್ ಅಬ್ದುಲ್ಲಾ ಬಿನ್ ಆಮಿರ್(ರ) ಅವರು ತಮ್ಮ ತಂದೆಯಿಂದ ಇನ್ನೊಂದು ವರದಿ ಮಾಡುತ್ತಾರೆ: ಹಝ್ರತ್ ಆಮಿರ್(ರ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಾತ್ರಿ ಒಂಟೆಯ ಮೇಲೇರಿ ಪ್ರಯಾಣಿಸುತ್ತಿದ್ದಾಗ ಒಂಟೆಯ ಬೆನ್ನ ಮೇಲೆ ಕುಳಿತು ನಫ್ಲ್ ನಮಾಝ್ ನಿರ್ವಹಿಸುತ್ತಿರುವುದನ್ನು ನೋಡಿದರು. ಯಾವ ದಿಕ್ಕಿಗೆ ಒಂಟೆ ಹೋಗುತ್ತಿತ್ತೋ ಅದೇ ದಿಕ್ಕನ್ನು ಅಭಿಮುಖೀಕರಿಸಿ ಅವರು ನಮಾಝ್ ನಿರ್ವಹಿಸುತ್ತಿದ್ದರು. (ಸಹೀಹ್ ಬುಖಾರಿ, ಕಿತಾಭುತ್ತಖ್ಸೀರು ಸ್ಸಲಾತ್, ಹದೀಸ್-1104)

ಹೀಗೆ ಪ್ರವಾಸದಲ್ಲಿ ಯಾವ ದಿಕ್ಕಿನಲ್ಲಿ ತಮ್ಮ ಸವಾಇಯು ಮುಖವಿರುತ್ತದೆಯೊ ಆ ದಿಕ್ಕಿನಲ್ಲಿಯೇ ನಮಾಝ್ ನಿರ್ವಹಿಸುವುದು ಧರ್ಮಬದ್ಧವಾಗಿದೆ.

ಹಝ್ರತ್ ಆಮಿರ್ ಬಿನ್ ರಬೀಅ(ರ) ವರದಿ ಮಾಡುತ್ತಾರೆ: ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಒಂದು ಅಂಧಕಾರಮಯ ರಾತ್ರಿಯಲ್ಲಿ ಪ್ರಯಾಣ ಮಾಡುತ್ತಿದ್ದೆನು. ನಾವು ಒಂದು ಸ್ಥಳದಲ್ಲಿ ಇಳಿದಾಗ ಒಬ್ಬ ವ್ಯಕ್ತಿ ನೆಲದಿಂದ ಕಲ್ಲುಗಳನ್ನು ಹೆಕ್ಕಿ ತೆಗೆದು ನಮಾಝ್‌ಗೋಸ್ಕರ ಸ್ಥಳವನ್ನು ಅಣಿಗೊಳಿಸಿದನು. ನಾವು ನಮಾಝ್ ನಿರ್ವಹಿಸಿದೆವು. ಬೆಳಗ್ಗೆ ನಮಗೆ ತಿಳಿಯಿತು ನಾವು ಖಿಬ್ಲದ ಕಡೆಗೆ ಮುಖ ಮಾಡಿರಲಿಲ್ಲ ಎಂದು. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅದರ ಬಗ್ಗೆ ಕೇಳಿದಾಗ ಅಲ್ಲಾಹನು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ಅವತೀರ್ಣಗೊಳಿಸಿದನು: **ವಲಿಲ್ಲಾಹಿಲ್ ಮಶ್ರಿಕಿ ವಲ್ ಮಗ್‌ರಿಬು ಫಐನಮಾ ತವಲ್ಲೂ ಫಸಮ್ಮ ವಜ್‌ಹುಲ್ಲಾಹಿ** (ಅಲ್‌ಬಖರ: 116) ಅಂದರೆ- ಪೂರ್ವ ಮತ್ತು ಪಶ್ಚಿಮ (ಎರಡೂ) ಅಲ್ಲಾಹನದ್ದಾಗಿವೆ. ನೀನು ಯಾವ ದಿಕ್ಕಿಗೆ ತಿರುಗಿದರೂ ಅಲ್ಲಿ ಅಲ್ಲಾಹನ ಮುಖವಿದೆ. (ಪವಿತ್ರ ಖುರ್‌ಆನ್ 2:116). ಎಂದರೆ ತಪ್ಪು ಗ್ರಹಿಕೆಯಿಂದ ಖಿಬ್ಲವನ್ನು ಅಭಿಮುಖೀಕರಿಸಲಾಗದಿದ್ದರೆ ಅದರಿಂದ ದೋಷವಿಲ್ಲ ಎಂದರ್ಥ. ಈ ವಚನ ಆ ಸಂದರ್ಭದಲ್ಲಿ ಅವತೀರ್ಣವಾಯಿತು ಎಂದು ಖಂಡಿತವಾಗಿ ಹೇಳಲಾಗದು. ಹಿಂದೆ ಅವತೀರ್ಣವಾದ ವಚನವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇತರರಿಗೆ ತಿಳಿಸಿಕೊಡಲಿಕ್ಕಾಗಿ ಆ ಸಂದರ್ಭದಲ್ಲಿ ಅದನ್ನು ಪಠಿಸಿರಬಹುದು.

ಹಝ್ರತ್ ಆಮಿರ್ ಬಿನ್ ರಬೀಅ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನನಗೋಸ್ಕರ ಒಂದು ಸಾರಿ ದುರೂದ್ ಪ್ರಾರ್ಥನೆ ಮಾಡಿದರೆ ಅಲ್ಲಾಹನು ಅವನಿಗೆ ಹತ್ತು ಸಾರಿ ಆಶೀರ್ವಾದ ಮಾಡುತ್ತಾನೆ. ಆದುದರಿಂದ ನನಗೋಸ್ಕರ ಕಡಿಮೆ ದುರೂದ್ ಪ್ರಾರ್ಥನೆ ಮಾಡುವುದು ಮತ್ತು ಹೆಚ್ಚು ಪ್ರಾರ್ಥನೆ ಮಾಡುವುದು ನಿಮ್ಮ ಇಷ್ಟ ಪ್ರಕಾರವಾಗಿದೆ.

ಇನ್ನೊಂದು ವರದಿ ಹೀಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನನಗೋಸ್ಕರ ದುರೂದ್ ಪ್ರಾರ್ಥನೆ ಮಾಡುವವನು ಆ ಪ್ರಾರ್ಥನೆ ಮಾಡುತ್ತಾ ಇರುವ ಸಮಯದಲ್ಲಿ ದೇವದೂತರು ಸಹ ಅವನಿಗೋಸ್ಕರ ಪ್ರಾರ್ಥಿಸುತ್ತಾರೆ. ಆದುದರಿಂದ ದುರೂದ್ ಪ್ರಾರ್ಥನೆ ಹೆಚ್ಚು ಸಲ ಮಾಡುವುದು ಮತ್ತು ಕಡಿಮೆ ಸಲ ಮಾಡುವುದು ಅವನ ಇಷ್ಟ ಪ್ರಕಾರವಾಗಿದೆ. (ಹುಲ್ಯತುಲ್ ಔಲಿಯಾ ವ ತ್ತಬಖಾತುಲ್ ಅಸ್‌ಫಿಯಾ, ಸಂಪುಟ-1, ಪುಟ-180, ದಾರುಲ್ ಫಿಕರ್ ಬೈರೂತ್ ಲೆಬನಾನ್ 1996)

ನಂತರ ಮುಂದಿನ ಪ್ರಸ್ತಾವನೆ ಹಝ್ರತ್ ಹರಾಮ್ ಬಿನ್ ಮಿಲ್ಹಾನ್(ರ) ಅವರದ್ದಾಗಿದೆ. ಹಝ್ರತ್ ಹರಾಮ್ ಬಿನ್ ಮಿಲ್ಹಾನ್(ರ) ಅವರ ಪೀಳಿಗೆಯು ಮುಂದುವರೆಯಲಿಲ್ಲ ಎಂದು ಉಲ್ಲೇಖಿಸಲಾಗಿದೆ.

(ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-266, ದಾರ್ ಅಹ್ಯಾಉತ್ತುರಾಸುಲ್ ಬೈರೂತ್)

ಹಝ್ರತ್ ಅಬ್ದುಲ್ಲಾ ಬಿನ್ ಅಬಿ ತಲ್ಹಾ(ರ) ಅವರ ವರದಿ ಮಾಡುತ್ತಾರೆ: ಅವರು ಹೇಳಿದರು: ಹಝ್ರತ್ ಅನಸ್(ರ) ಅವರು ನನಗೆ ಹೇಳಿದರು: ರಸೂಲುಲ್ಲಾಹ್(ಸ) ಅವರು ಉಮ್ಮು ಸುಲೈಮ್ ಅವರ ಸಹೋದರನಾಗಿದ್ದ ತನ್ನ ಚಿಕ್ಕಪ್ಪ ಹಝ್ರತ್ ಹರಾಮ್ ಬಿನ್ ಮಿಲ್ಹಾನ್(ರ) ಅವರನ್ನು ಎಪ್ಪತ್ತು ಕುದುರೆ ಸವಾರರೊಂದಿಗೆ ಬನೂ ಆಮಿರ್ ಅವರ ಕಡೆಗೆ ಕಳುಹಿಸಿದರು. ಮತ್ತು ಅಮೀರ್ ಬಿನ್ ತುಫೈಲ್ ಬಹುದೇವತಾವಾದಿಗಳ ನಾಯಕನಾಗಿದ್ದನು. ಆತನು ರಸೂಲುಲ್ಲಾಹ್(ಸ) ಅವರಿಗೆ ಮೂರು ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡುವ ಅಧಿಕಾರವನ್ನು ನೀಡಿದನು. ಆತನು ಹೇಳಿದನು ಊರಿನವರು ನಿಮಗೆ(ಸ) ಸೇರಿದವರಾಘಿರುತ್ತಾರೆ ಮತ್ತು ಹಳ್ಳಿಗರು ನನಗೆ ಸೇರುತ್ತಾರೆ ಅಥವಾ ನಿಮ್ಮ ರಸೂಲುಲ್ಲಾಹ್(ಸ) ಅವರ ಮರಣದ ನಂತರ ನಾನೇ ನಿಮ್ಮ ಉತ್ತರಾಧಿಕಾರಿಯಾಗುತ್ತೇನೆ, ಇಲ್ಲದಿದ್ದರೆ ಘತ್ಫಾನ್‌ನ ಎರಡು ಸಾವಿರ ಜನರನ್ನು ಕರೆದುಕೊಂಡು ಬಂದು ನಿಮ್ಮ ಮೇಲೆ ದಾಳಿ ಮಾಡುತ್ತೇನೆ ಎಂದಿದ್ದ. ಆಮಿರ್ ಮಹಿಳೆಯೊಬ್ಬರ ಮನೆಯಲ್ಲಿ ಪ್ಲೇಗ್ ರೋಗಕ್ಕೆ ತುತ್ತಾಗಿದ್ದನು. ಅಲೆ ಸೌಲ್‌ನ ಮಹಿಳೆಯ ಮನೆಯಲ್ಲಿ ಒಂಟೆಗೆ ಬಂದ ಅದೇ ಗಡ್ಡೆ ಕಾಯಿಲೆಯಾಗಿದೆ ಎಂದು ಹೇಳಿ. ನನ್ನ ಕುದುರೆಯನ್ನು ತನ್ನಿ. ಎಂದು ಅವನು ತನ್ನ ಕಡುರೆಯ ಸವಾರಿ ಮಾಡಿ ಆ ಕುದುರೆಯ ಮೇಲೆಯೇ ಮರಣ ಹೊಂದಿದನು. ಹೀಗೆ ಆತನ ಅಂತ್ಯವಾಗಿದೆ. ಅವರು ಆರಂಭದಲ್ಲಿ ಅದರ ಬಗ್ಗೆ ಪ್ರಸ್ತಾಪಿಸಿದರು.

ಮತ್ತೆ ಒಂದು ವರದಿಯಲ್ಲಿ ಆತನ ಹಾಗೂ ಆತನ ಗೋತ್ರದ ಬಗ್ಗೆ ಹೀಗೆ ಉಲ್ಲೇಖ ಲಭಿಸುತ್ತದೆ: ಹಝ್ರತ್ ಉಮ್ಮೆ ಸಲೀಂ(ರ) ರವರ ಸಹೋದರ ಹಝ್ರತ್ ಹರಾಮ್ ಬಿನ್ ಮಿಲ್ಹಾನ್(ರ) ಅವರು ಒಬ್ಬ ಕುಂಟ ವ್ಯಕ್ತಿ ಹಾಗೂ ಮತ್ತೋರ್ವ ವ್ಯಕ್ತಿಯನ್ನು ತನ್ನೊಂದಿಗೆ ಕರೆದುಕೊಂಡು ಬನೂ ಆಮಿರ್‌ನ ಬಳಿ ಹೋದನು. ಹರ್‍ರಾಮ್ ಆ ಇಬ್ಬರನ್ನು ಉದ್ದೇಶಿಸಿ ಹೇಳಿದನು ನೀವು ಹತ್ತಿರದಲ್ಲಿಯೇ ಇರಿ ನಾನು ಅವರ ಬಳಿಗೆ ಹೋಗುತ್ತೇನೆ. ಅವರು ನನಗೆ ಶಾಂತಿ (ಆಶ್ರಯ) ನೀಡಿದರೆ ನೀವು ಬರಬೇಕು ಮತ್ತು ಅವರು ನನ್ನನ್ನು ಕೊಂದಿದ್ದರೆ ನೀವು ನಿನ್ನ ಸಹಚರರ ಬಳಿಗೆ ಹೋಗಿ ಇದರ ಬಗ್ಗೆ ತಿಳಿಸಬೇಕು. ಹಝ್ರತ್ ಹರ್‍ರಾಮ್(ರ) ಅವರು ಅಮೀರ್ ಬಳಿಗೆ ಹೋಗಿ ಹೇಳಿದರು, **"ಅಲ್ಲಾಹನ** ಸಂದೇಶವಾಹಕರ ಸಂದೇಶವನ್ನು ತಿಳಿಸಲು ನೀವು ನನಗೆ ಶಾಂತಿಯನ್ನು ನೀಡುತ್ತೀರಾ?" ಹೀಗೆ ಹೇಳಿದ ಮೇಲೆ ಅವರ ಜೊತೆ ಮಾತಾಡತೊಡಗಿದರು. ಆ ಗೋತ್ರದ ಜನರು ತಮ್ಮ ಹಿಂದೆ ಬಂದ ಒಬ್ಬ ವ್ಯಕ್ತಿಗೆ ಸನ್ನೆ ಮಾಡಿದರು ಅಗ ಅವನು ಅವರ ದೇಹವನ್ನು ಚುಚ್ಚುವ ಈಟಿಯನ್ನು ಅವರ ಮೇಲೆ ಎಸೆದನು.

ಹಝ್ರತ್ ಹರ್‍ರಾವ್(ರ.ಅ) ಅವರು ತಮ್ಮ ಕೈಯಲ್ಲಿ ಗಾಯಗಳಿಂದ ಹೊರಬರುತ್ತಿದ್ದ ರಕ್ತವನ್ನು ತೆಗೆದುಕೊಂಡು, **"ಅಲ್ಲಾಹು ಅಕ್ಬರ್! ಫುಝ್ತು ವ ರಬ್ಬಿಲ್ ಕಅ್‌ಬ**- ಅಲ್ಲಾಹನೇ ದೊಡ್ಡವನು, ಕಅಬದ ಪ್ರಭುವಿನಾಣೆ ನಾನು ಜಯಶಾಲಿಯಾದೆನು.

ನಂತರ ಅವರು ಇತರ ವ್ಯಕ್ತಿಗಳನ್ನು ಹಿಂಬಾಲಿಸಿ ಅವರನ್ನು ಕೊಂದು ನಂತರ ಹೋಗಿ ಉಳಿದ ಖಾರಿಗಳ ಮೇಲೆ ದಾಳಿ ಮಾಡಿದರು ಮತ್ತು ಪರ್ವತದ ತುದಿಗೆ ಹೋದ ಕುಂಟನನ್ನು ಹೊರತುಪಡಿಸಿ ಎಲ್ಲರೂ ಕೊಲ್ಲಲ್ಪಟ್ಟರು. ಅಲ್ಲಾಹನು ನಮಗೆ ಬಹಿರಂಗಪಡಿಸಿದನು. ನಂತರ ಅದರ ಉಲ್ಲೇಖವನ್ನು ಸ್ಥಗಿತಗೊಳಿಸಲಾಯಿತು, ಅಂದರೆ, ನಮ್ಮ ಪರವಾಗಿ, ನಾವು ನಮ್ಮ ಭಗವಂತನನ್ನು ಭೇಟಿಯಾಗಿದ್ದೇವೆ ಎಂದು ನಮ್ಮ ಖೌಮಿನ ಜನರಿಗೆ ತಿಳಿಸಿ. ಅಲ್ಲಾಹನು ನಮ್ಮ ಬಗ್ಗೆ ಸಂತೋಷಪಟ್ಟಿರುವನು ಮತ್ತು ನಮ್ಮನ್ನು ಸಂತೋಷಪಡಿಸಿದನು. ನಂತರ ಪ್ರವಾದಿ ಮುಹಮ್ಮದ್(ಸ) ಅವರು ಸ್ವತಃ ಮೂವತ್ತು ದಿನಗಳ ಕಾಲ ಪ್ರತಿದಿನ ಬೆಳಿಗ್ಗೆ ಅವರ ವಿರುದ್ಧ ಪ್ರಾರ್ಥಿಸಿದರು, ಅಂದರೆ ಸರ್ವಶಕ್ತನಾದ ಅಲ್ಲಾಹನ ಮತ್ತು ಅವನ ಸಂದೇಶವಾಹಕನ ವಿರುದ್ಧ ದಂಗೆಯೆದ್ದ ರಿಅ್‌ಲ್, ಜಕ್ವಾನ್, ಬನು ಲಹ್ಯಾನ್ ಮತ್ತು ಉಸಿಯಾರವರ ವಿರುದ್ಧ. ಇದು ಬುಖಾರಿಯ ವರದಿಯಾಗಿದೆ.

(ಸಹೀಹ್ ಬುಖಾರಿ, ಕಿತಾಬ್ ಅಲ್-ಮುಘಾಜಿ, ಅಧ್ಯಾಯ ಘಜ್ವಾ ಅಲ್-ರಜೀಯಾ, ರಿಅ್‌ಲ್ ಮತ್ತು ಜಕ್ವಾನ್... ಹದೀಸ್-4091)

ಮತ್ತೊಂದು ವರದಿಯ ಪ್ರಕಾರ, ರಸೂಲುಲ್ಲಾಹ್(ಸ) ಅವರು ಬನಿ ಸುಲೈಮ್‌ನ ಎರಡು ಗೋತ್ರಗಳಾದ ರಿಅ್‌ಲ್ ಮತ್ತು ಜಕ್ವಾನ್ ಅವರ ವಿರುದ್ಧ ಒಂದು ತಿಂಗಳ ಕಾಲ ಸತತವಾಗಿ ಪ್ರಾರ್ಥಿಸಿದರು.

ಹಝ್ರತ್ ಅನಸ್(ರ) ಹೇಳುತ್ತಾರೆ: ಇದು ಖುನೂತ್‌ನ ಆರಂಭವಾಗಿತ್ತು. ಅದಕ್ಕೂ ಮೊದಲು ನಾವು ಖುನೂತ್ (ಪ್ರಾರ್ಥನೆ) ಮಾಡುತ್ತಿರಲಿಲ್ಲ. (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್-4088)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬಲಿದಾನಗಳನ್ನು ನೀಡುವ ಬಗ್ಗೆ ಸಹಾಬರಿಗಿದ್ದ ಭಾವೋದ್ವೇಗದ ಕುರಿತು ವಿವರಿಸುತ್ತಾ ಹೀಗೆ ಹೇಳಿದರು: ಚರಿತ್ರೆಯನ್ನು ಓದುವಾಗ ನಮಗೆ ತಿಳಿಯುತ್ತದೆ, ಸಹಾಬರು ಯುದ್ಧಗಳಲ್ಲಿ ಹೇಗೆ ಭಾಗವಹಿಸುತ್ತಿದ್ದರೆಂದರೆ ಯುದ್ಧಗಳಲ್ಲಿ ಶಹೀದರಾಗುವುದು ಅವರಿಗೆ ನೆಮ್ಮದಿಯನ್ನೂ ಸಂತೋಷವನ್ನೂ ನೀಡುತ್ತದೆ ಎಂಬ ರೀತಿಯಲ್ಲಿ. ಸಹಾಬರಿಗೆ ಸಂಬಂಧಿಸಿ ಅಂತಹ ಘಟನೆಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ವಿವರಿಸಲಾಗಿದೆ. ಅಲ್ಲಾಹನ ಮಾರ್ಗದಲ್ಲಿ ಹೋರಾಡಿ ಹತರಾಗುವುದು ತಮಗೆ ನೆಮ್ಮದಿ ನೀಡುವುದು ಎಂದು ಅವರು ಯೋಚಿಸುತ್ತಿದ್ದರು. ಉದಾಹರಣೆಗೆ ಅರಬ್ ದೇಶದ ಮಧ್ಯ ಭಾಗದಲ್ಲಿದ್ದ ಒಂದು ಗೋತ್ರದ ಕಡೆಗೆ ಪವಿತ್ರ ಖುರ್‌ಆನನ್ನು ಬಾಯಿಪಾಠ ಮಾಡಿದ ಹಾಫಿಝ್‌ಗಳ ಒಂದು ತಂಡವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಳುಹಿಸಿದ್ದರು. ಅವರ ಪೈಕಿ ಹರಾಮ್ ಬಿನ್ ಮಲ್‌ಹಾನ್(ರ) ಇಸ್ಲಾಮ್ ಧರ್ಮದ ಸಂದೇಶ ನೀಡಲು ಗೋತ್ರ ನಾಯಕನಾದ ಆಮಿರ್ ಬಿನ್ ತುಫೈಲ್ ಬಳಿಗೆ ಹೋದರು. ಅವರ ಜೊತೆಗಾರರಾದ ಸಹಾಬರು ಹಿಂದೆ ಉಳಿದರು. ಆರಂಭದಲ್ಲಿ ಆಮಿರ್ ಬಿನ್ ತುಫೈಲ್ ಮತ್ತು ಅವನ ಸಂಗಡಿಗರು ಕಾಪಟ್ಯ ಭರಿತರಾಗಿ ಹರಾವ್ ಬಿನ್ ಮಲ್‌ಹಾನ್(ರ)ರನ್ನು ಸ್ವಾಗತಿಸಿದರು. ಅವರು ಸಮಾಧಾನದಿಂದ ಕುಳಿತು ತಬ್ಲೀಗ್ ಮಾಡಲು ಪ್ರಾರಂಭಿಸಿದಾಗ ಕೆಲವು ಉದ್ದಟರು ಒಬ್ಬ ನೀಚನಿಗೆ ಸಂಜ್ಞೆ ಮಾಡಿದಾಗ ಅವನು ಹಝ್ರತ್ ಹರಾಮ್(ರ)ರನ್ನು ಹಿಂಬಾಗದಿಂದ ಈಟಿಯಿಂದ ತಿವಿದಾಗ ಅವರು ಬಿದ್ದುಬಿಟ್ಟರು. ಅವರು ಕೆಳಗೆ ಬೀಳುವಾಗ ಅವರ ನಾಲಗೆಯಿಂದ ತಾನಾಗಿ ಈ ಶಬ್ದಗಳು ಹೊರಟವು **ಅಲ್ಲಾಹು ಅಕ್‌ಬರ್ ಫುಝ್‌ತು ವ ರಬ್ಬಿಲ್ ಕಅಬ** - ಅಲ್ಲಾಹನೇ ದೊಡ್ಡವನು, ಕಅಬದ ಪ್ರಭುವಿನಾಣೆ ನಾನು ಜಯಶಾಲಿಯಾದೆನು. ಅನಂತರ ದುಷ್ಕರ್ಮಿಗಳಾದ ಜನರು ಉಳಿದ ಸಹಾಬರನ್ನು ಸುತ್ತುವರಿದು ಆಕ್ರಮಣ ಮಾಡಿ ಹತ್ಯೆ ಮಾಡಿದರು. ಆ ಸಹಾಬರಲ್ಲಿ ಹಝ್ರತ್ ಅಬೂಬಕರ್(ರ) ವಿಮೋಚಿಸಿದ ಗುಲಾಮ ಆಮಿರ್ ಬಿನ್ ಫಹೀರ ಸಹ ಇದ್ದರು. ಅವರನ್ನು ಹತ್ಯೆ ಮಾಡಿದವನು ಅನಂತರ ಮುಸ್ಲಿಮನಾದನು. ತಾನು ಮುಸ್ಲಿಮನಾಗಲು ಕಾರಣವೇನೆಂದು ವಿವರಿಸುತ್ತಾ ಅವನು ಹೇಳಿದನು: ಆಮಿರ್ ಬಿನ್ ಫಹೀರರನ್ನು ನಾನು ಶಹೀದ್ ಮಾಡಿದಾಗ ಅವರ ಬಾಯಿಯಿಂದ ತಾನಾಗಿ ಈ ಶಬ್ದಗಳು ಕೇಳಿಸಿದುವು, **ಫುಝ್‌ತು ವಲ್ಲಾಹಿ** - ಅಲ್ಲಾಹನಾಣೆ ನಾನು ಜಯಶಾಲಿಯಾದೆನು. ಈ ಘಟನೆಗಳು ಸೂಚಿಸುವುದೇನೆಂದರೆ ಸಹಾಬರಿಗೆ ಮೃತ್ಯು ದುಃಖದಾಯಕವಾಗಿರಲಿಲ್ಲ. ಅದು ಅವರಿಗೆ ಸಂತೋಷದಾಯಕವಾಗಿತ್ತು.

(ಏಕ್ ಆಯತ್ ಕೀ ಪುರ್ ಮಾರಿಫ್ ತಫ್ಸೀರ್, ಅನ್ವರ್ ಉಲೂಮ್, ಸಂಪುಟ-18, ಪುಟ 612-613)

ಮತ್ತೆ ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಹೇಳುತ್ತಾರೆ ನಜ್ದ್ ನ ಕೆಲವು ಜನರು ಪ್ರವಾದಿ ಮುಹಮ್ಮದ್(ಸ) ಅವರ ಬಳಿಗೆ ಬಂದರು. ನಾನು ಅದನ್ನು ಬಿಡುತ್ತೇನೆ. ಮತ್ತು ಈ ಸಂದರ್ಭದಲ್ಲಿ, ನಾನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರ ಉಲ್ಲೇಖವನ್ನು ಪ್ರಸ್ತುತಪಡಿಸುತ್ತೇನೆ. ಇದು ಸ್ವಲ್ಪ ಹೆಚ್ಚು ವಿವರವಾಗಿದೆ. ಅವರು ಘಟನೆಯನ್ನು ವಿವರವಾಗಿ ವಿವರಿಸುತ್ತಾರೆ ಬರೆಯುತ್ತಾರೆ: ಓರ್ವ ವ್ಯಕ್ತಿ ಮಧ್ಯ ಅರೇಬಿಯಾದಲ್ಲಿ ಬನೂ ಆಮಿರ್ ಗೋತ್ರದ ಮುಖ್ಯಸ್ಥರಾಗಿದ್ದ ಅಬು ಬಾರಾ ಅಮಿರಿ ಒಬ್ಬ ವ್ಯಕ್ತಿ ಪವಿತ್ರ ಪ್ರವಾದಿ (ಸ) ಅವರ ಸೇವೆಗೆ ಬಂದನು. ರಸೂಲುಲ್ಲಾಹ್(ಸ) ಅವರು ಅವರಿಗೆ ಇಸ್ಲಾಂ ಧರ್ಮವನ್ನು ಬಹಳ ಸೌಮ್ಯತೆ ಮತ್ತು ಸಹಾನುಭೂತಿಯಿಂದ ಬೋಧಿಸಿದರು, ಮತ್ತು ಅವರು ಅವರ(ಸ) ಭಾಷಣವನ್ನು ತೋರಿಕೆಯ ಆಸಕ್ತಿ ಮತ್ತು ಗಮನದಿಂದ ಕೇಳಿದರು, ಆದರೆ ಅವನು ಮುಸ್ಲಿಮನಾಗಲಿಲ್ಲ. ಆದಾಗ್ಯೂ, ಅವರು ನಜ್ದ್ ಜನರಲ್ಲಿ ಇಸ್ಲಾಂ ಧರ್ಮವನ್ನು ಬೋಧಿಸಲು ನನ್ನೊಂದಿಗೆ ತಮ್ಮ ಕೆಲವು ಸಹಚರರನ್ನು ನಜ್ದ್‌ಗೆ ಕಳುಹಿಸುವಂತೆ ಅವನು ಪವಿತ್ರ ಪ್ರವಾದಿ (ಸ) ಅವರನ್ನು ಕೇಳಿಕೊಂಡನು. ಮತ್ತು ನಜ್ದ್ ಜನರು ನಿಮ್ಮ(ಸ) ಆಹ್ವಾನವನ್ನು ತಿರಸ್ಕರಿಸುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಅದಕ್ಕೆ ರಸೂಲುಲ್ಲಾಹ್(ಸ) ಅವರು ಹೇಳಿದರು: ನಾನು ನಜ್ದ್ ಜನರನ್ನು ನಂಬುವುದಿಲ್ಲ. ನೀವು ಎಂದಿಗೂ ಚಿಂತಿಸಬೇಡಿ ಎಂದು ಅಬು ಬಾರಾ ಹೇಳಿದನು. ನಾನು ಅವರ ಸುರಕ್ಷತೆಯನ್ನು ಖಾತರಿಪಡಿಸುತ್ತೇನೆ. ಅಬು ಬಾರಾ ಒಂದು ಗೋತ್ರದ ಮುಖ್ಯಸ್ಥ ಮತ್ತು ಪ್ರಭಾವಶಾಲಿ ವ್ಯಕ್ತಿಯಾಗಿರುವುದರಿಂದ, ಅವನು ತೃಪ್ತಿಗೊಳಿಸಿದನ್ನು ಕಂಡು ರಸೂಲುಲ್ಲಾಹ್(ಸ) ಅವರು ಅವನನ್ನು ನಂಬಿ ನಜ್ದ್‌ಗೆ ಸಹಚರರ ಒಂದು ಗುಂಪನ್ನು ಕಳುಹಿಸಿದರು.

ಇದು ಇತಿಹಾಸದ ವರದಿಯಾಗಿದೆ. ಬುಖಾರಿಯಲ್ಲಿ ರಿಅ್‌ಲ್

ಮತ್ತು ಜಕ್ವಾನ್ ಇತ್ಯಾದಿ ಗೋತ್ರಗಳು (ಬನುಸುಲೈಮ್‌ನ ಪ್ರಸಿದ್ಧ ಗೋತ್ರಗಳ ಶಾಖೆಯಾಗಿದ್ದವು), ಅವರಲ್ಲಿ ಕೆಲವರು ರಸೂಲುಲ್ಲಾಹ್(ಸ.ಅ) ಅವರ ಸೇವೆಗೆ ಬಂದರು ಎಂದು ಉಲ್ಲೇಖಿಸಲಾಗಿದೆ. ಇಸ್ಲಾಂ ಧರ್ಮದ ಅಭಿವ್ಯಕ್ತಿ. ಇಸ್ಲಾಮಿನ ಶತ್ರುಗಳ ವಿರುದ್ಧ ನಮಗೆ ಸಹಾಯ ಮಾಡಲು ಕೆಲವು ಪುರುಷರನ್ನು ಕಳುಹಿಸಬೇಕೆಂದು ವಿನಂತಿಸಿದರು (ಬೋಧಕರು ಅಥವಾ ಸೈನಿಕರು ಯಾವ ರೀತಿಯ ಸಹಾಯವನ್ನು ಅವರು ವಿವರಿಸಲಿಲ್ಲ). ಆದ್ದರಿಂದ ರಸೂಲುಲ್ಲಾಹ್(ಸ) ಅವರು ಈ ತಂಡವನ್ನು ಕಳುಹಿಸಿದರು. ಈ ಎರಡು ವರದಿಗಳ ಹೊಂದಾಣಿಕೆಯೆಂದರೆ ಆಮಿರ್ ಗೋತ್ರದ ಮುಖ್ಯಸ್ಥ ಅಬು ಬಾರಾ ಆಮಿರ್ ಸಹ ರಿಅ್‌ಲ್ ಮತ್ತು ಜಕ್ವಾನ್ ಜನರೊಂದಿಗೆ ಬಂದು ಅವರ ಪರವಾಗಿ ರಸೂಲುಲ್ಲಾಹ್(ಸ) ಅವರೊಂದಿಗೆ ಮಾತನಾಡಿದನು. ಆದ್ದರಿಂದ, ಐತಿಹಾಸಿಕ ವರದಿಯ ಪ್ರಕಾರ, ರಸೂಲುಲ್ಲಾಹ್(ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಅವರು ನಜ್ದ್ ಜನರಿಂದ ನನಗೆ ತೃಪ್ತಿ ಇಲ್ಲ ಎಂದು ಹೇಳಿದರು ಅದಕ್ಕೆ ಆತನು ನೀವು ಚಿಂತಿಸಬೇಡಿ ಎಂದು ಉತ್ತರಿಸಿದರು. ರಸೂಲುಲ್ಲಾಹ್(ಸ.ಅ) ಅವರ ಸಹಚರರಿಗೆ ಯಾವುದೇ ಹಾನಿಯಾಗುವುದಿಲ್ಲ ಎಂದು ನಾನು ಖಾತರಿಪಡಿಸುತ್ತೇನೆ. ದೇವರೇ ಬಲ್ಲವನಾಗಿದ್ದಾನೆ. ಆದಾಗ್ಯೂ, ಸಫರ್ 4 ಹಿಜ್ರಿಯಲ್ಲಿ, ರಸೂಲುಲ್ಲಾಹ್(ಸ) ಅವರು ಮುಂದಿರ್ ಬಿನ್ ಅಮ್ರ್ ಅನ್ಸಾರಿಯವರ ನೇತೃತ್ವದಲ್ಲಿ ಸಹಚರರ ತಂಡವನ್ನು ಕಳುಹಿಸಿದರು. ಈ ಜನರು ಸಾಮಾನ್ಯವಾಗಿ ಅನ್ಸಾರ್‌ಗಳಿಗೆ ಸೇರಿದವರಾಗಿದ್ದರು ಮತ್ತು ಅವರ ಸಂಖ್ಯೆ ಎಪ್ಪತ್ತರಷ್ಟಿತ್ತು ಮತ್ತು ಬಹುತೇಕ ಎಲ್ಲರೂ ಖಾರಿಗಳು, ಅಂದರೆ ಪವಿತ್ರ ಖುರ್‌ಆನ್ ಪಾಠಕರಾಗಿದ್ದರು ಈ ಜನರು ಹಗಲಿನಲ್ಲಿ ಕಾಡಿನಿಂದ ಕಟ್ಟಿಗೆಯನ್ನು ಸಂಗ್ರಹಿಸಿ ತಮ್ಮ ಹೊಟ್ಟೆಪಾಡು ಮಾಡುತ್ತಿದ್ದರು ಮತ್ತು ರಾತ್ರಿಯ ಹೆಚ್ಚಿನ ಭಾಗವನ್ನು ಆರಾಧನೆಯಲ್ಲಿ ಕಳೆಯುತ್ತಿದ್ದರು. ಈ ಜನರು ಒಂದು ಬಾವಿಯ ಕಾರಣದಿಂದ 'ಬಿಅ್‌ರೆ ಮಾಊನ' ಎಂದು ಕರೆಯಲ್ಪಡುವ ಸ್ಥಳಕ್ಕೆ ತಲುಪಿದಾಗ, ಅವರಲ್ಲಿ ಒಬ್ಬರಾದ ಅನಸ್ ಬಿನ್ ಮಲಿಕ್(ರ) ಅವರ ಚಿಕ್ಕಪ್ಪ ಹರಮ್ ಬಿನ್ ಮಿಲ್ಹಾನ್(ರ) ಅವರು ಇಸ್ಲಾಂ ಧರ್ಮಕ್ಕೆ ಆಹ್ವಾನದ ಸಂದೇಶದೊಂದಿಗೆ ಆ ಗೋತ್ರಕ್ಕೆ ಬಂದರು. ಆಮಿರ್ ಗೋತ್ರದ ಮುಖ್ಯಸ್ಥ ಮತ್ತು ಅಬು ಬಾರಾ ಅವರ ಸೋದರಳಿಯ ಆಮಿರ್ ಬಿನ್ ತುಫೈಲ್ ಅವನ ಮುಂದೆ ಹೋದರು ಮತ್ತು ಉಳಿದ ಸಹಚರರು ಹಿಂದೆಯೇ ಉಳಿದುಕೊಂಡರು. ಹರಮ್ ಬಿನ್ ಮಿಲ್ಹಾನ್(ರ) ಅವರು ಆಮಿರ್ ಬಿನ್ ತುಫೈಲ್ ಮತ್ತು ಅವರ ಸಹಚರರ ಬಳಿಗೆ ರಸೂಲುಲ್ಲಾಹ್(ಸ)ರವರ ಸಂದೇಶವಾಹಕರಾಗಿ ಬಂದಾಗ, ಅವರು ಮೊದಲು ಅವರನ್ನು ಕಪಟವಾಗಿ ವರ್ತಿಸಿದರು, ಆದರೆ ಅವರು ತೃಪ್ತರಾದ ನಂತರ ಕುಳಿತು ಇಸ್ಲಾಂ ಧರ್ಮವನ್ನು ಬೋಧಿಸಲು ಪ್ರಾರಂಭಿಸಿದರು. ಅವರಲ್ಲಿರುವ ಕೆಲವು ದುಷ್ಟರು ಒಬ್ಬ ವ್ಯಕ್ತಿಯನ್ನು ಸನ್ನೆ ನೀಡಿ ಆ ಮುಗ್ಧ ರಾಯಭಾರಿಯನ್ನು ಹಿಂದಿನಿಂದ ಈಟಿಯನ್ನು ಎಸೆದು ಅಲ್ಲಿಯೇ ಕೊಲೆ ಮಾಡಿದನು. ಆ ಸಮಯದಲ್ಲಿ ಹರಮ್ ಬಿನ್ ಮಿಲ್ಹಾನ್(ರ) ಅವರ ನಾಲಿಗೆಯಲ್ಲಿ ಈ ಮಾತುಗಳು ಮಾತ್ರ ತುಂಬಿದ್ದವು. **ಅಲ್ಲಾಹು ಅಕ್ಬರ್! ಫುಝ್‌ತು ವ ರಬ್ಬಿಲ್ ಕಅ್‌ಬತಿ–** ಅಂದರೆ ಅಲ್ಲಾಹನು ಮಹಾನ್ ಆಗಿದ್ದಾನೆ! ಕಅ್‌ಬದ ಪ್ರಭುವಿನ ಆಣೆ ನಾನು ಜಯಶಾಲಿಯಾಗಿದ್ದೇನೆ. ಆಮಿರ್ ಬಿನ್ ತುಫೈಲ್ ರಸೂಲುಲ್ಲಾಹ್(ಸ) ಅವರ ಸಂದೇಶವಾಹಕರನ್ನು ಕೊಲ್ಲುವುದನ್ನು ನಿಲ್ಲಿಸಲಿಲ್ಲ, ಬದಲಿಗೆ ನಂತರ ಅವನು ತನ್ನ ಗೋತ್ರದ ಜನರನ್ನು ಬನೂ ಆಮಿರ್ ಅವರನ್ನು ಉಳಿದ ಮುಸ್ಲಿಂ ಸಮುದಾಯದ ಮೇಲೆ ದಾಳಿ ಮಾಡಲು ಪ್ರಚೋದಿಸಿದನು. ಆದರೆ ಅವರು ನಿರಾಕರಿಸಿದರು ಮತ್ತು ಹೇಳಿದರು. ಅಬು ಬಾರಾ ಅವರ ಜವಾಬ್ದಾರಿಯಿಂದಾಗಿ ನಾವು ಮುಸ್ಲಿಮರ ಮೇಲೆ ದಾಳಿ ಮಾಡುವುದಿಲ್ಲ ಎಂದು. ತದನಂತರ ಆಮೊರ್ ತನ್ನೊಂದಿಗೆ ಸುಲೈಮ್‌ನ ಗೋತ್ರವಾದ ಬನೂ ರಿಅ್‌ಲ್, ಜಕ್ವಾನ್, ಉಸಯ್ಯ ಮೊದಲಾದವರನ್ನು (ಬುಖಾರಿಯ ವರದಿಯ ಪ್ರಕಾರ ರಸೂಲುಲ್ಲಾಹ್(ಸ)ರವರ ಬಳಿಗೆ ನಿಯೋಗವಾಗಿ ಬಂದವರು) ಮತ್ತು ಎಲ್ಲರನ್ನೂ ಕರೆದೊಯ್ದನು. ಈ ಸಣ್ಣ ಮತ್ತು ಅಸಹಾಯಕ ಮುಸ್ಲಿಮರ ಗುಂಪಿನಲ್ಲಿರುವ ಈ ಜನರು ಆಕ್ರಮಣಕಾರಿಯಾದರು. ಈ ಕಾಡುಮೃಗಗಳು ತಮ್ಮ ಕಡೆಗೆ ಬರುತ್ತಿರುವುದನ್ನು ಕಂಡ ಮುಸ್ಲಿಮರು, ನಿಮ್ಮೊಂದಿಗೆ ನಮಗೆ ಯಾವುದೇ ದ್ವೇಷವಿಲ್ಲ ಎಂದು ಹೇಳಿದರು. ನಾವು ರಸೂಲುಲ್ಲಾಹ್(ಸ) ಅವರಿಂದ ಕಾರ್ಯಕ್ಕಾಗಿ ಬಂದಿದ್ದೇವೆ, ಮತ್ತು ನಾವು ನಿಮ್ಮೊಂದಿಗೆ ಹೋರಾಡಲು ಬಂದಿಲ್ಲ. ಆದರೆ ಅವರು ಒಬ್ಬರ ಮಾತನ್ನು ಕೇಳದೆ ಎಲ್ಲರನ್ನೂ ಖಡ್ಗದಿಂದ ಕೊಂದು ಹಾಕಿದರು. ಆಗ ಅಲ್ಲಿದ್ದ ಸಂಗಡಿಗರಲ್ಲಿ ಒಬ್ಬನೇ ಒಬ್ಬ ಕುಂಟನಾಗಿ ಬೆಟ್ಟವನ್ನೇರಿದ. ಈ ಸಹಚರನ ಹೆಸರು ಕಾಅ್‌ಬ್ ಬಿನ್ ಝಾಯ್ದ್(ರ) ಮತ್ತು ಕೆಲವು ವರದಿಗಳ ಪ್ರಕಾರ ನಾಸ್ತಿಕರು ಅವರ ಮೇಲೆ ದಾಳಿ ಮಾಡಿದರು, ಇದರಿಂದ ಅವರು ಗಾಯಗೊಂಡರು ಮತ್ತು ನಾಸ್ತಿಕರು ಅವರು ಸತ್ತನೆಂದು ಭಾವಿಸಿ ಅವರನ್ನು ತೊರೆದರು, ಆದರೆ ವಾಸ್ತವವಾಗಿ ಅವರು ಇನ್ನೂ ಜೀವಂತವಾಗಿದ್ದರು ಮತ್ತು ಅವರು ಬದುಕುಳಿದರು.

ಈ ಸಹಚರರ ಗುಂಪಿನಲ್ಲಿ ಇಬ್ಬರು ವ್ಯಕ್ತಿಗಳು ಅಂದರೆ ಅಮ್ರ್ ಬಿನ್ ಉಮಯ್ಯ ಝುಮ್ರಿ ಮತ್ತು ಮುಂಧಿರ್ ಬಿನ್ ಮುಹಮ್ಮದ್ ಒಂಟೆಗಳನ್ನು ಮೇಯಿಸಲು ತಮ್ಮ ಗುಂಪಿನಿಂದ ಬೇರ್ಪಟ್ಟರು. ಅವರು ದೂರದಿಂದ ತಮ್ಮ ಈ ಡೇರೆಯ ಕಡೆಗೆ ನೋಡಿದರು ಅಲ್ಲಿ ಪಕ್ಷಿಗಳ ಹಾರಾಡುತ್ತಿದ್ದನ್ನು ಕಂಡರು. ಅವರು ಈ ಮರುಭೂಮಿಯ ಚಿಹ್ನೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವರಾಗಿದ್ದರು. ತಕ್ಷಣ ಅಲ್ಲಿ ಯುದ್ಧ ನಡೆದಿದೆ ಎಂದುಕೊಂಡರು. ಹಿಂತಿರುಗಿದಾಗ ಕ್ರೂರಿ ನಾಸ್ತಿಕರು ಮಾಡಿದ ರಕ್ತಪಾತದ ಸಾಹಸವು ಅವರ ಕಣ್ಣ ಮುಂದೆಯೇ ಇತ್ತು. ದೂರದಿಂದಲೇ ಈ ದೃಶ್ಯವನ್ನು ನೋಡಿದ ಅವರು ಕೂಡಲೇ ಈಗ ಏನು ಮಾಡಬೇಕು ಎಂದು ತಮ್ಮತಮ್ಮಲ್ಲೇ ಸಮಾಲೋಚಿಸಿದರು. ಅವರಲ್ಲಿ ಒಬ್ಬರು ನಾವು ತಕ್ಷಣವೇ ಇಲ್ಲಿಂದ ಓಡಿಹೋಗಿ ಮದೀನಕ್ಕೆ ತಲುಪಿ ರಸೂಲುಲ್ಲಾಹ್(ಸ) ಅವರಿಗೆ ಈ ಘಟನೆಯ ವರದಿ ನೀಡಬೇಕೆಂದು ಹೇಳಿದರು, ಆದರೆ ಇನ್ನೊಬ್ಬರು ಈ ಅಭಿಪ್ರಾಯವನ್ನು ಒಪ್ಪಲಿಲ್ಲ. ನಮ್ಮ ಅಮೀರ್ ಮುಂಧಿರ್ ಬಿನ್ ಅಮ್ರೊ(ರ) ಇಲ್ಲಿ ಶಹೀದ್ ಆಗಿರುವಾಗ ನಾನು ಈ ಸ್ಥಳವನ್ನು ಬಿಟ್ಟು ಓಡಿಹೋಗುವುದಿಲ್ಲ ಎಂದು ಹೇಳಿ ಅವರು ಮುಂದೆ ಹೋಗಿ ಹೋರಾಡಿ ಶಹೀದ್ ಆದರು. ಮತ್ತು ಇನ್ನೊಬ್ಬರು ಅವರ ಹೆಸರು ಅಮ್ರ್ ಬಿನ್ ಉಮಯ್ಯ ಝುಮ್ರಿ, ನಾಸ್ತಿಕರಿಂದ ಸೆರೆಹಿಡಿಯಲ್ಪಟ್ಟು ಜೈಲಿನಲ್ಲಿರಿಸಲ್ಪಟ್ಟರು ಮತ್ತು ಬಹುಶಃ ಅವರು ಅವರನ್ನು ಸಹ ಕೊಂದಿರಬಹುದು, ಆದರೆ ಅವರು ಮುಝುರ್ ಗೋತ್ರದವರು ಎಂದು ತಿಳಿದಾಗ, ಆಮಿರ್ ಬಿನ್ ತುಫೈಲ್ ಅರಬ್ ಸಂಪ್ರದಾಯದ ಪ್ರಕಾರ, ಅವನು ತನ್ನ ಹಣೆಯ ಕೆಲವು ಕೂದಲನ್ನು ಕತ್ತರಿಸಿ ಅವರನ್ನು ಬಿಡುಗಡೆ ಮಾಡಿದನು ಮತ್ತು ನನ್ನ ತಾಯಿ ಮುಝುರ್ ಗೋತ್ರದ ಗುಲಾಮನನ್ನು ಸ್ವತಂತ್ರಗೊಳಿಸಲು ಪ್ರತಿಜ್ಞೆ ಮಾಡಿದ್ದ ಕಾರಣದುಂದ ಅವನು ಇದಕ್ಕೆ ಬದಲಾಗಿ ನಾನು ನಿನ್ನನ್ನು ಬಿಡುಗಡೆ ಮಾಡುತ್ತಿದ್ದೇನೆ ಎಂದು ಹೇಳಿದನು. ಈ ಏಳು ಸಹಚರರಲ್ಲಿ ಇಬ್ಬರೇ ಉಳಿದಿದ್ದರಂತೆ. ಒಬ್ಬರು ಅಮ್ರೋ ಬಿನ್ ಉಮಯ್ಯ ಝುಮ್ರಿ ಮತ್ತು ಇನ್ನೊಬ್ಬರು ಕಅ್‌ಬ್ ಬಿನ್ ಝೈದ್(ರ) ಅವರನ್ನು ನಾಸ್ತಿಕರು ಮರಣ ಹೊಂದಿದ್ದಾರೆ ಎಂದು ಬಿಟ್ಟರು.

ಆಮಿರ್ ಬಿನ್ ಫುಹೈರಾ, ಹಝ್‌ರತ್ ಅಬು ಬಕರ್(ರ) ಅವರ ಸ್ವತಂತ್ರಗೊಳಿಸಿದ ಗುಲಾಮ ಮತ್ತು ಇಸ್ಲಾಂ ಧರ್ಮದ ದೀರ್ಘಕಾಲದ ಬೆಂಬಲಿಗರಾಗಿದ್ದರು. ಬಿಅ್‌ರೆ ಮಾಊನಾದ ಸಂದರ್ಭದಲ್ಲಿ ಹುತಾತ್ಮರಾದ ಸಹಚರರಲ್ಲಿ ಒಬ್ಬರಾಗಿದ್ದರು. ಅವರನ್ನು ಜಬ್ಬಾರ್ ಬಿನ್ ಸಲ್ಮಾ ಎಂಬಾತ ಕೊಂದಿದ್ದನು. ಜಬ್ಬಾರ್ ನಂತರ ಮುಸ್ಲಿಂ ಆದರು. ಅವರು ಮುಸ್ಲಿಮ್ ಆಗಿದ್ದ ಕಾರಣವನ್ನು ತಿಳಿಸುತ್ತ ಹೇಳುತ್ತಾರೆ: ನಾನು ಆಮಿರ್ ಬಿನ್ ಫುಹೈರಾ(ರ) ಅವರನ್ನು ಶಹೀದ್ ಮಾಡಿದಾಗ ಅವರ ಬಾಯಿಂದ **ಫುಝ್‌ತು ವಲ್ಲಾಹಿ** ಅಂದರೆ, "ದೇವರೇ, ನಾನು ನನ್ನ ಗುರಿಯನ್ನು ತಲುಪಿದ್ದೇನೆ." ಎಂದು ಹೇಳಿದರು. ನಾನು ಈ ವ್ಯಕ್ತಿಯನ್ನು ಕೊಂದಿದ್ದೇನೆ ಮತ್ತು ನಾನು ನನ್ನ ಗುರಿಯನ್ನು ತಲುಪಿದ್ದೇನೆ ಎಂದು ಹೇಳುತ್ತಿರುವ ಈ ಮಾತುಗಳನ್ನು ಕೇಳಿ ನನಗೆ ಆಶ್ಚರ್ಯವಾಯಿತು ಎಂದು ಜಬ್ಬಾರ್ ಹೇಳುತ್ತಾರೆ. ಇದು ಏನು? ಹಾಗಾಗಿ ನಾನು ನಂತರ ಜನರಲ್ಲಿ ಇದಕ್ಕೆ ಕಾರಣವನ್ನು ಕೇಳಿದೆ ಮತ್ತು ಮುಸ್ಲಿಂ ಜನರೆಲ್ಲರೂ ದೇವರ ಮಾರ್ಗದಲ್ಲಿ ತಮ್ಮ ಪ್ರಾಣವನ್ನು ನೀಡಲು ಸಿದ್ಧರಿದ್ದಾರೆ ಎಂದು ನಾನು ಕಂಡುಕೊಂಡೆ. ಅವರು ಇದನ್ನು ಒಂದು ದೊಡ್ಡ ಯಶಸ್ಸನ್ನು ಪರಿಗಣಿಸುತ್ತಾರೆ ಮತ್ತು ಇದು ನನ್ನ ಸ್ವಭಾವದ ಮೇಲೆ ಎಷ್ಟು ಪ್ರಭಾವ ಬೀರಿತು ಎಂದರೆ ಅವರು ಅಂತಿಮವಾಗಿ ಈ ಪ್ರಭಾವದಿಂದ ಮುಸ್ಲಿಮರಾದರು.

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಮತ್ತು ಅವರ ಸಹಚರರು ರಜೀಅ್ ಘಟನೆ ಮತ್ತು ಬಿರ್ ಮಾಊನ ಘಟನೆಯ ಬಗ್ಗೆ ಒಂದೇ ಸಮಯದಲ್ಲಿ ಮಾಹಿತಿಯನ್ನು ಪಡೆದರು ಮತ್ತು ಅವರು ತೀವ್ರ ಆಘಾತಕ್ಕೊಳಗಾದರು. ಅಂತಹ ಆಘಾತವು ಅವರಿಗೆ ಹಿಂದೆಂದೂ ಸಂಭವಿಸಿಲ್ಲ ಮತ್ತು ನಂತರವೂ ಸಂಭವಿಸಿಲ್ಲ ಎಂದು ವರದಿಗಳಲ್ಲಿ ಹೇಳಲಾಗಿದೆ. ವಾಸ್ತವವಾಗಿ, ಸುಮಾರು ಎಂಬತ್ತು ಸಹಚರರು ವಂಚನೆಯಿಂದ ಈ ರೀತಿಯಲ್ಲಿ ಹಠಾತ್ತನೆ ಕೊಲ್ಲಲ್ಪಟ್ಟರು ಮತ್ತು ಸಹಚರರು ಸಹ ಪವಿತ್ರ ಖುರ್‌ಆನ್‌ನ ಹಾಫಿಝ್‌ಗಳಾಗಿದ್ದರು ಮತ್ತು ಬಡ ಮತ್ತು ನಿಸ್ವಾರ್ಥ ವರ್ಗಕ್ಕೆ ಸೇರಿದವರಾಗಿದ್ದರು. ಅರಬ್ಬರ ಅನಾಗರಿಕ ಪದ್ಧತಿಗಳು ಮತ್ತು ಸಂಪ್ರದಾಯಗಳನ್ನು ಪರಿಗಣಿಸಿದರೂ ಇದು ಅಸಾಮಾನ್ಯ ಘಟನೆಯಾಗಿರಲಿಲ್ಲ. ಮತ್ತು ರಸೂಲುಲ್ಲಾಹ್(ಸ) ಅವರಿಗೆ, ಈ ಸುದ್ದಿ ಅವರ ಎಂಬತ್ತು ಪುತ್ರರ ಸಾವಿನ ಸುದ್ದಿಯಂತಿತ್ತು ಬದಲಿಗೆ ಅದಕ್ಕಿಂತ ಹೆಚ್ಚಾಗಿತ್ತು, ಆಧ್ಯಾತ್ಮಿಕ ವ್ಯಕ್ತಿಗೆ ಆಧ್ಯಾತ್ಮಿಕ ಸಂಬಂಧವು ಖಂಡಿತವಾಗಿಯೂ ಅವರೊಂದಿಗೆ ಇರುತ್ತದೆ, ಲೌಕಿಕ ಸಂಬಂಧವು ಲೌಕಿಕ ವ್ಯಕ್ತಿಗಿಂತ

ಪ್ರಿಯವಾಗಿದೆ. ಆದ್ದರಿಂದ ರಸೂಲುಲ್ಲಾಹ್(ಸ) ಈ ಅಪಘಾತಗಳಿಂದ ತೀವ್ರ ಆಘಾತಕ್ಕೊಳಗಾದರು, ಆದರೆ ಇಸ್ಲಾಮ್ ಧರ್ಮದಲ್ಲಿ ಯಾವುದೇ ಸಂದರ್ಭದಲ್ಲಿ ತಾಳ್ಮೆಯಿಂದ ಇರುವ ಬೋಧನೆ ಇದ್ದಿದ್ದರಿಂದ, ಈ ಸುದ್ದಿಯನ್ನು ಕೇಳಿದಾಗ ರಸೂಲುಲ್ಲಾಹ್(ಸ) ಅವರು **"ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"** ಎಂದು ಪಠಿಸಿದರು. ಮತ್ತು ನಂತರ ಈ ಮಾತುಗಳನ್ನು ಹೇಳುವಾಗ ಮೌನವಾಗಿದರು: **ಹಾಝು ಅಮಲು ಅಬೀ ಬರ್ರಾಅ ವಖದ್ ಕುನ್ತು ಲಿಹಾಝು ಕಾರಿಹನ್ ಮುತಖವ್ವಿಫನ್** ಅಂದರೆ– ಇದು ಅಬು ಬಾರಾನ ದುಷ್ಕೃತ್ಯದ ಫಲವಾಗಿದೆ ಇಲ್ಲದಿದ್ದರೆ ನಾನು ಈ ಜನರನ್ನು ಕಳುಹಿಸುವುದನ್ನು ಇಷ್ಟಪಡುತ್ತಿರಲಿಲ್ಲ ಮತ್ತು ನಾನು ನಜ್ದ್ ಜನರಿಂದ ಭಯಭೀತನಾಗಿರುತ್ತಿದ್ದೆ." (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–517–521)

ಇನ್ನು ಹಝ್ರತ್ ಸಅದ್ ಬಿನ್ ಖೌಲ(ರ)ರ ಬಗ್ಗೆ ಪ್ರಸ್ತಾಪಿಸುತ್ತೇನೆ. ಅವರು ಬನೂ ಮಾಲಿಕ್ ಬಿನ್ ಹಸ್ಲ್ ಬಿನ್ ಆಮಿರ್ ಬಿನ್ ಲುಯಿ ಗೋತ್ರಕ್ಕೆ ಸೇರಿದವರು. ಕೆಲವರ ಪ್ರಕಾರ, ಅವರು ಬನೂ ಆಮಿರ್ ಅವರ ಪ್ರತಿಜ್ಞಾಬದ್ಧರಾಗಿದ್ದರು. ನೀವು ಯೆಮನ್‌ನಲ್ಲಿ ನೆಲೆಸಿದ ಪರ್ಷಿಯಾದ ಜನರಲ್ಲಿ ಒಬ್ಬರಾಗಿದ್ದರು. (ಉಸದುಲ್ ಗಾಬ ಮಾರಿಫತ್ ಅಲ್–ಸಹಾಬಾ, ಭಾಗ–2, ಪುಟ–427, ದಾರ್ ಅಲ್–ಕಿತಾಬ್ ಅಲ್–ಇಲ್ಮಿಯಾ ಬೈರುತ್ 2003)

ಆಮಿರ್ ಬಿನ್ ಸಅದ್ ತನ್ನ ತಂದೆ ಸಅದ್ ಬಿನ್ ವಖಾಸ್(ರ)ರಿಂದ ವರದಿ ಮಾಡುತ್ತಾರೆ: ಹಝ್ರತ್ ಸಅದ್ ಬಿನ್ ಖೌಲ(ರ) ಹೇಳಿದರು: ಹಜ್ಜತುಲ್ ವಿದಾ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರೋಗಿಯಾಗಿದ್ದ ನನ್ನನ್ನು ಸಂದರ್ಶಿಸಿದರು. ರೋಗಬಾಧೆಯಿಂದ ನಾನು ಮರಣದ ತನಕ ತಲಪಿದ್ದೆನು. ನಾನು ಹೇಳಿದೆ: ನನ್ನ ಕಷ್ಟವನ್ನು ತಾವು ನೋಡುತ್ತಿರುವಿರಿ. ನನ್ನ ವಾರೀಸುದಾರಳಾಗಿ ನನ್ನ ಒಬ್ಬ ಪುತ್ರಿ ಮಾತ್ರ ಇದ್ದಾಳೆ. ನಾನು ವಿಚಾರಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿನ್ನ ಸಂಪತ್ತಿನ ಮೂರನೆಯ ಒಂದು ಪಾಲು ದಾನವಾಗಿ ನೀಡು. ವಾರೀಸುದಾರರನ್ನು ಉತ್ತಮ ಸ್ಥಿತಿಯಲ್ಲಿರಿಸಿ ಅಗಲಿ ಹೋಗುವುದು ಅವರನ್ನು ಅನ್ಯರನ್ನು ಆಶ್ರಯಿಸುವ ಸ್ಥಿತಿಯಲ್ಲಿ ಬಿಟ್ಟು ಹೋಗುವುದಕ್ಕಿಂತ ಉತ್ತಮವಾಗಿದೆ. ಅಲ್ಲಾಹನ ಮಾರ್ಗದಲ್ಲಿ ಎಷ್ಟು ಖರ್ಚು ಮಾಡಿದರೂ ಅಲ್ಲಾಹನು ಅದಕ್ಕೆ ಪ್ರತಿಫಲ ನೀಡುವನು. ನಿಮ್ಮ ಪತ್ನಿಯ ಬಾಯಿಯಲ್ಲಿ ಒಂದು ತುತ್ತು ಆಹಾರ ಹಾಕಿದರೂ ಅದಕ್ಕೆ ಪ್ರತಿಫಲ ದೊರಕುವುದು.

ಅವರು ಹೇಳುತ್ತಾರೆ: ನಾನು ಕೇಳಿದೆ, ಯಾ ರಸೂಲಲ್ಲಾಹ್(ಸ), ನನ್ನ ಸಹಚರರಿಂದ ನಾನು ಹಿಂದೆ ಉಳಿಯುತ್ತೇನೆಯೇ? ನಾನು ಇಲ್ಲಿ ಸಾಯುತ್ತೇನೆಯೇ? ಅವರು ಹೇಳಿದರು, "ನೀವು ಹಿಂದೆ ಉಳಿಯುವುದಿಲ್ಲ, ಆದರೆ ನೀವು ಅಲ್ಲಾಹನ ಪ್ರಸನ್ನತೆಯನ್ನು ಬಯಸುವ ಒಳ್ಳೆಯ ಕಾರ್ಯಗಳನ್ನು ಮಾಡುವವರು, ನೀವು ಅದರ ಮೂಲಕ ಉನ್ನತ ಸ್ಥಾನ ಮತ್ತು ಉನ್ನತಿಯನ್ನು ಹೊಂದುವಿರಿ ಮತ್ತು ನೀವು ಹಿಂದೆ ಉಳಿಯುವ ದೂರವಿಲ್ಲ." ಅಂದರೆ, ರಾಷ್ಟ್ರಗಳು ನಿಮ್ಮಿಂದ ಪ್ರಯೋಜನ ಪಡೆಯುವವರೆಗೆ ಮತ್ತು ಇತರ ಕೆಲವರು ನಷ್ಟಗಳನ್ನು ಅನುಭವಿಸುವವರೆಗೆ ನಿಮಗೆ ದೀರ್ಘಾಯುಷ್ಯವನ್ನು ನೀಡಲಾಗುವುದು. ಆಗ ಅವರು ಹೇಳಿದರು, ಓ ಅಲ್ಲಾಹ್! ನನ್ನ ಸಹಚರರ ವಲಸೆಯನ್ನು ಪೂರ್ಣಗೊಳಿಸಿ ಮತ್ತು ಅವರನ್ನು ಹಿಮ್ಮಡಿಯಲ್ಲಿ ಹಿಂತಿರುಗಿಸಬೇಡಿ. ಆದರೆ ಬಡ ಸಅದ್ ಬಿನ್ ಖೌಲಾ(ರ). ರಸೂಲುಲ್ಲಾಹ್(ಸ) ಅವರು ವಲಸೆಯ ನಂತರ ಮಕ್ಕಾದಲ್ಲಿ ನಿಧನರಾದ ಕಾರಣ ಅವರ ಬಗ್ಗೆ ರಸೂಲುಲ್ಲಾಹ್(ಸ) ದುಃಖವನ್ನು ವ್ಯಕ್ತಪಡಿಸಿದ್ದಾರೆ ಎಂದು ವರದಿಗಾರರು ಹೇಳುತ್ತಾರೆ. ರಸೂಲುಲ್ಲಾಹ್(ಸ) ಸಅದ್ ಬಿನ್ ಖೌಲಾ(ರ) ಅವರು ಮಕ್ಕಾದಲ್ಲಿ ನಿಧನರಾದರು ಎಂದು ಪಶ್ಚಾತ್ತಾಪ ಪಡುತ್ತಿದ್ದರು ಎಂಬ ವರದಿ ಇದೆ. ಏಕೆಂದರೆ ರಸೂಲುಲ್ಲಾಹ್(ಸ) ಅವರು ಮಕ್ಕಾದಿಂದ ವಲಸೆ ಬಂದವರು ಅಲ್ಲಿಗೆ ಮರಳಲು ಅಥವಾ ಹಜ್ ಮತ್ತು ಉಮ್ರಾವನ್ನು ನಿರ್ವಹಿಸುವುದಕ್ಕಿಂತ ಹೆಚ್ಚು ಸಮಯ ಅಲ್ಲಿ ಉಳಿಯಲು ಇಷ್ಟಪಡಲಿಲ್ಲ. (ಸಹೀಹ್ ಮುಸ್ಲಿಮ್, ಕಿತಾಬುಲ್ ವಸಿಯ್ಯತ್, ಹದೀಸ್–4209) (ಅತ್ತಬಖಾತುಲ್ ಕುಬ್ರ, ಭಾಗ–3, ಪುಟ–312, ಸಅದ್ ಬಿನ್ ಖೌಲಾ(ರ), ದಾರುಲ್ ಕುತುಬ್ ಇಲ್ಮಿಯ ಬೈರೂತ್, 1990)

ಇಸ್ಮಾಈಲ್ ಬಿನ್ ಮುಹಮ್ಮದ್ ಬಿನ್ ಸಅದ್(ರ) ರವರಿಂದ ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ರವರು ಸಅದ್ ಬಿನ್ ಖೌಲಾ(ರ) ಅವರು ಮಕ್ಕಾದಲ್ಲಿ ಮರಣಹೊಂದಿದರೆ, ಅವರನ್ನು ಮಕ್ಕಾದಲ್ಲಿ ಸಮಾಧಿ ಮಾಡಬಾರದು ಎಂದು ಸಾಯಿಬ್ ಬಿನ್ ಉಮೈರ್ ಅಲ್–ಖಾರಿಗೆ ಆದೇಶಿಸಿದರು. (ಅಲ್–ಅಸಾಬಾ, ಸಂಪುಟ–3, ಪುಟ–21, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1995)

ಮತ್ತೊಂದು ವರದಿಯ ಪ್ರಕಾರ, ರಸೂಲುಲ್ಲಾಹ್(ಸ) ಅವರು ಹಝ್ರತ್ ಸಅದ್ ಬಿನ್ ಅಬಿ ವಕ್ಕಾಸ್(ರ) ಅವರ ಬಗ್ಗೆ ಅವರು ಮಕ್ಕಾದಲ್ಲಿ ನಿಧನ ಹೊಂದಿದರೆ, ಅವರನ್ನು ಮಕ್ಕಾದಲ್ಲಿ ದಫನ್ ಮಾಡಬಾರದು ಎಂದು ಹೇಳಿದರು. (ಸಬ್ಲುಲ್–ಹಾದಿ ವರ್‍ರಶ್ಶಾದ್, ಭಾಗ–8, ಪುಟ–485, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1993)

ಹಝ್ರತ್ ಸಅದ್ ಬಿನ್ ಖೌಲಾ(ರ) ಅವರು ಹಜ್ಜತುಲ್ ವಿದಾ ಸಂದರ್ಭದಲ್ಲಿ ನಿಧನರಾದಾಗ, ಅವರ ಪತ್ನಿ ಗರ್ಭಿಣಿಯಾಗಿದ್ದರು. ಅವರ ಮರಣದ ನಂತರ ಅವರಿಗೆ ಒಂದು ಮಗು ಜನಿಸಿತು. ವರದಿಗಳ ಪ್ರಕಾರ, ಇಪ್ಪತ್ತೈದು ರಾತ್ರಿಗಳು ಅಥವಾ ಅದಕ್ಕಿಂತ ಕಡಿಮೆ ಸಮಯದ ನಂತರ ಅವರಿಗೆ ಮಗು ಜನಿಸಿತು. ಪ್ರಸೂತಿಯ ನಂತರ ಅವರು ಮದುವೆಯ ಸಂದೇಶ ನೀಡಿದವರಿಗೆ ಅಲಂಕಾರ ಮಾಡಿಕೊಂಡರು. ಅವರ ಬಳಿಗೆ ಬನೀ ಅಬ್ದುದ್ದಾರ್‌ನ ಓರ್ವ ವ್ಯಕ್ತಿ ಅಬು ಸನಬಿಲ್ ಬಿನ್ ಬಾಕಾಕ್ ಬಂದರು, ಬಕಾಕ್ ಅವರಿಗೆ, "ಏನು ವಿಷಯ? ನೀವು ಅಲಂಕರಿತವಾಗಿರುವುದನ್ನು ನಾನು ನಿಮಗೆ ನೋಡುತ್ತೇನೆ." ಬಹುಶಃ ನಿಮ್ಮ ಉದ್ದೇಶ ಮದುವೆಯಾಗುವುದಾಗಿದೆ. ಅಲ್ಲಾಹನಆಣೆ! ನಾಲ್ಕು ತಿಂಗಳು ಹತ್ತು ದಿನ ಕಳೆಯುವವರೆಗೆ ನೀವು ಮದುವೆಯಾಗಲು ಸಾಧ್ಯವಿಲ್ಲ. ಸುಬೈಅ ಹೇಳುತ್ತಾರೆ: ಅವರು ಹೀಗೆ ನನಗೆ ಹೇಳಿದಾಗ, ನಾನು ಸಂಜೆ ನನ್ನ ಬಟ್ಟೆಗಳನ್ನು ಧರಿಸಿಕೊಂಡೆ ಮತ್ತು ನಾನು ರಸೂಲುಲ್ಲಾಹ್(ಸ) ಅವರ ಬಳಿಗೆ ಬಂದು ಅದರ ಬಗ್ಗೆ ಕೇಳಿದೆ. ಅದಕ್ಕೆ ರಸೂಲುಲ್ಲಾಹ್(ಸ) ಅವರು ನನಗೆ ಫತ್ವಾ ನೀಡಿದರು, ನನಗೆ ಹೆರಿಗೆಯಾದಾಗ ಅದು ಹಲಾಲ್ ಆಯಿತು ಮತ್ತು ನಾನು ಬಯಸಿದರೆ, ನಾನು ಮದುವೆಯಾಗಬಹುದು ಎಂದು ಹೇಳಿದರು. (ಸಹೀಹ್ ಮುಸ್ಲಿಮ್, ಕಿತಾಬುತ್ತಲಾಖ್, ಹದೀಸ್–3722) (ಇಸ್ತಿಯಾಬ್, ಸಂಪುಟ–4, ಪುಟ–1859, ದಾರುಲ್ ಜೀಲ್ ಬೈರುತ್ 1992)

ಇದರಿಂದಲೂ ಕೆಲವು ಸಮಸ್ಯೆಗಳ ಪರಿಹಾರ ಗೊತ್ತಾಗುತ್ತವೆ. ನಂತರ ಹಝ್ರತ್ ಅಬುಲ್ ಹೈಸಮ್ ಬಿನ್ ತೈಹಾನ್(ರ)ರ ಬಗ್ಗೆ ಪ್ರಸ್ತಾಪಿಸುವೆನು. ಅವರ ಸಹೋದರನ ಹೆಸರು ಹಝ್ರತ್ ಉಬೈದ್ ಬಿನ್ ಉಬೈದ್ ಅಥವಾ ಹಝ್ರತ್ ಅತೀಕ್ ಬಿನ್ ಅಲ್–ತೈಹಾನ್ ಎಂದು ಉಲ್ಲೇಖಿಸಲಾಗಿದೆ. ಇವರು ಉಹುದ್ ಯುದ್ಧದಲ್ಲಿ ಶಹೀದ್ ಆದರು.(ಅತ್ತಬಖಾತುಲ್ ಕುಬ್ರಾ, ಭಾಗ–3, ಪುಟಗಳು 341 ರಿಂದ 343, ದಾರುಲ್ ಕುತುಬ್ ಬೈರುತ್ 1990)

ಹಝ್ರತ್ ಅಬುಲ್ ಹೈಸಮ್ ಬಿನ್ ತೈಹಾನ್(ರ)ರ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಿನಂತಿಸಿದರು. ನಾನು ಎಲ್ಲರಿಗಿಂತ ಮೊದಲು ತಮ್ಮ ಬೈಅತ್ ಮಾಡುವೆನು. ನಾವು ಹೇಗೆ ಬೈಅತ್ ಮಾಡಬೇಕು? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಬನೀ ಇಸ್ರಾಈಲ್ ಸಮುದಾಯದ ಜನರು ಪ್ರವಾದಿ ಮೂಸರವರ ಬೈಅತ್ ಮಾಡಿದ ಹಾಗೆ ನನ್ನ ಬೈಅತ್ ಮಾಡಿರಿ. (ಮಾರಿಫತಿಸ್ಸಹಾಬ ಲಿಅಬಿ ನೀಮ್, ಸಂಪುಟ–4, ಪುಟ–196, ದಾರುಲ್ ಕುತುಬ್ ಇಲ್ಮಿಯ ಬೈರೂತ್)

ರಸೂಲುಲ್ಲಾಹ್(ಸ) ಅವರು ಹಝ್ರತ್ ಅಬುಲ್ ಹೈಸಮ್(ರ) ಮತ್ತು ಹಝ್ರತ್ ಉಸೇದ್ ಬಿನ್ ಹುದೈರ್(ರ) ಅವರನ್ನು ಬನೀ ಅಬ್ದುಲ್ ಅಶ್ಹಲ್ ಗೋತ್ರದ ಮೇಲೆ ನಕೀಬ್‌ರನ್ನಾಗಿ ನೇಮಿಸಿದ್ದರು. (ಅಲ್–ಅಸಾಬಾ ಫಿ ತಮೀಜ್ ಅಲ್–ಸಹಾಬಾ, ಭಾಗ–7, ಪುಟ–365, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಬೈರುತ್ 1995)

ಹಝ್ರತ್ ಅಬೂ ಹೈಸಮ್(ರ) ಯುದ್ಧ ಮಾಡುವಾಗ ಎರಡು ಖಡ್ಗಗಳನ್ನು ತೂಗಾಡಿಸುತ್ತಿದ್ದರು. ಆ ಕಾರಣದಿಂದ ಅವರನ್ನು ಝುಸ್ಸೈಫೈನ್ ಎಂದು ಸಹ ಕರೆಯಲಾಗುತ್ತಿತ್ತು. (ಅಲಿಸ್ತಿಅಬ್, ಭಾಗ–2, ಪುಟ–477, ದಾರುಲ್ ಜೀಲ್ ಬೈರೂತ್ 1992)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸಿಫ್ಫೀನ್ ಯುದ್ಧದಲ್ಲಿ ಶಹೀದರಾದರು ಎಂದು ಬರೆದಿದ್ದಾರೆ. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–230)

ಇನ್ನು ಹಝ್ರತ್ ಆಸಿಮ್ ಬಿನ್ ಸಾಬಿತ್ ಬಗ್ಗೆ ಪ್ರಸ್ತಾಪಿಸುವೆನು. ಹಝ್ರತ್ ಸಾಬಿತ್ ಅವರ ಪುತ್ರನ ಹೆಸರು ಮುಹಮ್ಮದ್ ಎಂದಾಗಿತ್ತು ಅವರು ಹಿಂದ್ ಬಿನ್ತೆ ಮಾಲಿಕ್ ಅವರ ಗರ್ಭದಿಂದ ಜನಿಸಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–352, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಉಹುದ್ ಯುದ್ಧದಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಸಮೀಪದಲ್ಲಿದ್ದ ಜನರ ಬಗ್ಗೆ ಒಂದು ಆಯತ್‌ನ

ವ್ಯಾಖ್ಯಾನದಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರು ಹಝ್ರತ್ ಇಮಾಮ್ ರಾಝಿ ಅವರು ಹದಿನಾಲ್ಕು ಪುರುಷರ ಬಗ್ಗೆ ಖಚಿತವಾದ ಸಾಕ್ಷ್ಯವನ್ನು ನೀಡುತ್ತಾರೆ ಎಂದು ಹೇಳಿದ್ದಾರೆ. ಇವರೆಲ್ಲರು ಹಾಜರಾಗಿದ್ದರು ಎಂದು ಹೆಸರುಗಳನ್ನು ಪ್ರಸ್ತಾಪಿಸುತ್ತಾರೆ ಮತ್ತು ರಸೂಲುಲ್ಲಾಹ್(ಸ) ಅವರನ್ನು ಎಂತಹ ಸಂದರ್ಭ ಬಂದರೂ ಅವರು ಜೊತೆಯಲ್ಲೇ ಇದ್ದರು. ವಲಸಿಗರ ಹೆಸರುಗಳಲ್ಲಿ, ಹಜ್ರತ್ ಅಬು ಬಕರ್(ರ), ಹಝ್ರತ್ ಅಲಿ(ರ) ...... ಶಿಯಾ ಹಝ್ರತ್ ಅಲಿ(ರ) ಮಾತ್ರ ಅಲ್ಲಿದ್ದರು ಎಂದು ಹೇಳುತ್ತಾರೆ, ಆದರೆ ಹಝ್ರತ್ ಅಬು ಬಕರ್(ರ), ಹಝ್ರತ್ ಅಲಿ(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಸಅದ್ ಬಿನ್ ಅಬಿ ವಕ್ಕಾಸ್(ರ), ಹಝ್ರತ್ ತಲ್ಹಾ ಬಿನ್ ಉಬೈದುಲ್ಲಾ(ರ) ಮತ್ತು ಹಝ್ರತ್ ಅಬು ಉಬೈದಾ ಬಿನ್ ಅಲ್-ಜರ್ರಾಹ್(ರ) ಮತ್ತು ಹಝ್ರತ್ ಜುಬೈರ್ ಬಿನ್ ಅವಾಮ್(ರ). ಅನ್ಸಾರ್‌ಗಳಲ್ಲಿ ಖಬಾಬ್ ಬಿನ್ ಮುಂಧಿರ್(ರ), ಹಝ್ರತ್ ಅಬು ದುಜಾನಾ(ರ), ಹಝ್ರತ್ ಅಸಿಮ್ ಬಿನ್ ಸಾಬಿತ್(ರ), ಹಝ್ರತ್ ಹರಿತ್ ಬಿನ್ ಸಿಮ್ಮಾ(ರ), ಬಹುಶಃ ಹಝ್ರತ್ ಸಹ್ಲ್ ಬಿನ್ ಹುನೈಫ್(ರ) ಮತ್ತು ಹಾಗೆಯೇ ಉಸೈದ್ ಬಿನ್ ಹುದೈರ್(ರ), ಹಝ್ರತ್ ಸಅದ್ ಬಿನ್ ಮುಆಝ್(ರ) ಮತ್ತಿತರರು ಕೂಡ ಇದ್ದರು. ಎಂಟು ಜನರು ಸಾವಿನ ಮೇಲೆ (ಬೈಅತ್) ಪ್ರಮಾಣ ಮಾಡಿದವರು ಎಂದು ಸಹ ಉಲ್ಲೇಖಿಸಲಾಗಿದೆ. ವಲಸಿಗರಲ್ಲಿ ಮೂವರು ಮತ್ತು ಅನ್ಸಾರ್‌ಗಳಲ್ಲಿ ಐವರು ಇದ್ದರು, ಮತ್ತು ಆ ಸಮಯದಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್, ಅವರ ಸೇವಕನ ಅಗತ್ಯವಿದ್ದ ಕಾರಣ ಎಂಟು ಜನರಲ್ಲಿ ಒಬ್ಬರು ಸಹ ಶಹೀದ್ ಆಗಿಲ್ಲ. ಇದು ಅವರಿಗೆ ಅಲ್ಲಾಹನ ಅಸಾಧಾರಣ ರಕ್ಷಣೆಯ ದರ್ಶನವಾಗಿತ್ತು. (ದ'ಸ್'ರ್'ಲ್ ಖುರ್‌ಆನ್ ಹಝ್ರತ್ ಖಲೀಫತುಲ್ ಮಾಸಿಹ್ ರಾಬಿ(ರ), ಫೆಬ್ರವರಿ 20, 1994)

ಮುಂದಿನ ಪ್ರಸ್ತಾಪ ಹಝ್ರತ್ ಸಹ್ಲ್ ಬಿನ್ ಹುನೈಫ್ ಅನ್ಸಾರಿ(ರ)ರ ಬಗ್ಗೆಯಾಗಿದೆ. ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ಬದ್ರ್ ಯುದ್ಧದ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ಅವರೊಂದಿಗೆ ನೂರು ಒಂಟೆಗಳು ಮತ್ತು ಎರಡು ಕುದುರೆಗಳು ಇದ್ದವು. ಅವುಗಳಲ್ಲಿ ಒಂದನ್ನು ಹಝ್ರತ್ ಮುಕ್ದಾದ್ ಬಿನ್ ಅಸ್ವದ್(ರ) ಮತ್ತು ಇನ್ನೊಂದನ್ನು ಹಝ್ರತ್ ಮಸ್‌ಅಬ್ ಬಿನ್ ಉಮೈರ್(ರ) ಮತ್ತು ಹಝ್ರತ್ ಸಾಹ್ಲ್ ಬಿನ್ ಹುನೈಫ್(ರ) ಇದ್ದರು. ರಸೂಲುಲ್ಲಾಹ್(ಸ) ಅವರ ಸಹಚರರು ದಾರಿಯಲ್ಲಿ ಈ ಒಂಟೆಗಳ ಮೇಲೆ ಸವಾರಿ ಮಾಡುತ್ತಿದ್ದರು. ರಸೂಲುಲ್ಲಾಹ್(ಸ) ಹಝ್ರತ್ ಹಮ್ಜಾ ಬಿನ್ ಅಬ್ದುಲ್ ಮುತ್ತಲಿಬ್ ಅವರ ಮಿತ್ರರಾಗಿದ್ದ ಹಝ್ರತ್ ಅಲಿ(ರ) ಮತ್ತು ಹಝ್ರತ್ ಮುರ್ಷದ್ ಬಿನ್ ಅಬಿ ಮುರ್ಷದ್ ಘಾನ್ವಿ(ರ) ಅವರ ಪ್ರತಿಜ್ಞಾಬದ್ಧರಾಗಿದ್ದರು ಅವರೆಲ್ಲರು ಒಬ್ಬರಬ್ಬರ ನಂತರ ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದರು.
(ಮುಜಮುಲ್ ಔಸತ್ ಲಿತ್ತಬ್ರಾನಿ, ಭಾಗ-5, ಪುಟ-324, ಹದೀಸ್-5438, ದಾರುಲ್ ಹರ್ಮೈನ್ ಬೈರೂತ್ 1995)

ಉಹುದ್‌ನಲ್ಲಿ ರಸೂಲುಲ್ಲಾಹ್(ಸ) ಅವರ ಸಮೀಪ ಇರುತ್ತಿದ್ದವರಲ್ಲಿ ಹಝ್ರತ್ ಸಹ್ಲ್ ಬಿನ್ ಹನೀಫ್(ರ) ಅವರನ್ನು ಸಹ ಉಲ್ಲೇಖಿಸಲಾಗಿದೆ.

ಯುಸೈರ್ ಬಿನ್ ಅಮ್ರೊ ಅವರು ವರದಿ ಮಾಡುತ್ತಾರೆ: ಒಮ್ಮೆ ನಾನು ಹಝ್ರತ್ ಸಹ್ಲ್ ಬಿನ್ ಹುನೈಫ್(ರ) ಅವರ ಸೇವೆಗೆ ಹಾಜರಾಗಿದ್ದೆ ಮತ್ತು ಅವರು ಹರುರಿಯಾ ಪಂಥದ ಬಗ್ಗೆ ರಸೂಲುಲ್ಲಾಹ್(ಸ) ಅವರಿಂದ ಕೇಳಿಂತಹ ಯಾವುದೇ ಹದೀಸ್ ಅನ್ನು ನನಗೆ ಹೇಳಲು ಕೇಳಿಕೊಂಡೆ. ಅದಕ್ಕೆ ಅವರು ಹೇಳಿದರು ನಾನು ಕೇಳಿದ್ದಕ್ಕಿಂತ ಹೆಚ್ಚಿಗೆ ಏನನ್ನೂ ಮಾಡುವುದಿಲ್ಲ ಎಂದರು. ರಸೂಲುಲ್ಲಾಹ್(ಸ) ಅವರು ಇಲ್ಲಿಂದ ಹೊರಹೊಮ್ಮುವ ರಾಷ್ಟ್ರವನ್ನು ಉಲ್ಲೇಖಿಸುವುದನ್ನು ನಾನು ಕೇಳಿದೆ ಮತ್ತು ಅವರು ಇರಾಕ್ ಅನ್ನು ತೋರಿಸಿದರು. ಆ ಜನರು ಪವಿತ್ರ ಖುರ್‌ಆನ್ ಪಠಿಸುತ್ತಾರೆ ಆದರೆ ಅದು ಅವರ ಗಂಟಲಿಗೆ ಇಳಿಯುವುದಿಲ್ಲ. ಬೇಟೆಗಾಗಿ ಹೊರಡುವಂತಹ ಬಾಣದಂತೆ ಅವರು ಧರ್ಮದಿಂದ ದೂರವಾಗುತ್ತಾರೆ. ವರದಿಗಾರರು ಹೇಳುತ್ತಾರೆ: ರಸೂಲುಲ್ಲಾಹ್(ಸ)ರವರು ಅವರ ಯಾವುದಾದರು ಚಿಹ್ನೆಗಳನ್ನು ಸಹ ಉಲ್ಲೇಖಿಸಿದ್ದಾರೆಯೇ ಎಂದು ನಾನು ಅವರನ್ನು ಕೇಳಿದೆ. ಅದಕ್ಕೆ ಅವರು ಉತ್ತರಿಸಿದರು: ನಾನು ಕೇಳಿದ್ದು ಹೀಗೆ ಎಂದಾಗಿದೆ. ಅದಕ್ಕಿಂತ ಹೆಚ್ಚಿನದನ್ನು ನಾನು ನಿಮಗೆ ಹೇಳಲಾರೆ.
(ಮುಸ್ನದ್ ಅಹ್ಮದ್, ಸಂಪುಟ-25, ಪುಟ-351, ಹದೀಸ್ ಸಹ್ಲ್ ಬಿನ್ ಹುನೈಫ್, ವರದಿ ಸಂಖ್ಯೆ-15977, ಮುಅಸ್ಸಸುರ್ರಿಸಾಲ ಬೈರುತ್) ನಾನು ಕೇಳಿದ್ದನ್ನು ಹೇಳಿದ್ದೇನೆ, ಈಗ ನೀವೇ ಊಹಿಸಿಕೊಳ್ಳಿ.

ಹಝ್ರತ್ ಸಹ್ಲ್ ಬಿನ್ ಹುನೈಫರು ನಿಧನ ಹೊಂದಿದಾಗ ಅವರ ಜನಾಝು ನಮಾಝ್ ನಿರ್ವಹಿಸುವಾಗ ಹಝ್ರತ್ ಅಲಿ(ರ) ಐದು ಸಾರಿ ತಕ್‌ಬೀರ್ ಹೇಳಿದರು. ಜನರು ಆಶ್ಚರ್ಯಗೊಂಡು ಕೇಳಿದಾಗ ಹಝ್ರತ್ ಅಲಿ(ರ) ಹೇಳಿದರು: ಸಹ್ಲ್ ಬಿನ್ ಹುನೈಫ್ ಬದರ್ ಯುದ್ಧದಲ್ಲಿ ಭಾಗವಹಿಸಿದ ಸಹಾಬಿಯಾಗಿರುವರು. ಬದರ್ ಯುದ್ಧದಲ್ಲಿ ಭಾಗವಹಿಸಿದವರಿಗೆ ಇತರರಿಗಿಂತ ಶ್ರೇಷ್ಠತೆ ಇದೆ. ಅವರ ಶ್ರೇಷ್ಠತೆ ನಿಮಗೆ ತಿಳಿಸಿಕೊಡಲು ನಾನು ಇಚ್ಛಿಸಿದೆ. (ಅತ್ತಬಖಾತುಲ್ ಕುಬ್ರಾ, ಸಂಪುಟ-3, ಪುಟ-360, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1990)

